
ಹೊಯ್ಸಳ ಮಾಲೆ - 12

ಆಯುರ್ವೇದ ವಿದ್ವಾನ್
ವೆಂಕಟಸುಬ್ಬಾ ಪಂಡಿತರು



ಹೊಯ್ಸಳ ಕರ್ನಾಟಕ ಸಂಘ (ರಿ.)
3ನೇ ಅಡ್ಡರಸ್ತೆ, ಹೊಂಬೇಗೌಡನಗರ,
ಬೆಂಗಳೂರು - 560 027

ಹೊಯ್ಸಳ ಕರ್ನಾಟಕ ಸಂಘ (ರಿ.)

3ನೇ ಅಡ್ಡರಸ್ತೆ, ಹೊಂಬೇಗೌಡನಗರ, ಬೆಂಗಳೂರು - 560 0[illegible]

ಈ ಸಂಘವು ಹೊಯ್ಸಳ ಮಾಲೆ ಎಂಬ ಹೆಸರಿನಲ್ಲಿ ನ[illegible]ಡದ ಖ್ಯಾತನಾಮರನ್ನು ಕುರಿತು 64 ಪುಟಗಳಿಗೆ ಮೀರದಂತೆ ಕಿರು [illegible]ನ್ನು ಪ್ರಕಟಿಸಲು ಮುಂದೆ ಬಂದಿದೆ. ಇದನ್ನು ಮುಂದುವರಿಸಲು [illegible]ಸಿದ್ಧ ತಾಂತ್ರಿಕೋದ್ಯಮಿಗಳಾದ ಮಾನ್ಯ ಶ್ರೀ ಎಂ.ವಿ. ಸತ್ಯನಾರಾಯ[illegible]ವರು ಒಂದು ಲಕ್ಷ ರೂಪಾಯಿಗಳ ಪುದುವಟ್ಟನ್ನು ಸ್ಥಾಪಿಸಿ ಅದರ ಸ[illegible]ಲಕ ರಾಗಿದ್ದಾರೆ. ಈ ಪುಸ್ತಕಗಳನ್ನು ಪ್ರಕಟಿಸಲು ನಮ್ಮ ಪ್ರಸಿದ್ಧ ವಿದ್ವಾಂಸರೂ ನಿಘಂಟು ತಜ್ಞರೂ ಆದ ನಾಡೋಜ ಪ್ರೊ॥ ಜಿ. ವೆಂಕಟಸುಬ್ಬಯನವರ ಅಧ್ಯಕ್ಷತೆಯಲ್ಲಿ ಒಂದು ಸಂಪಾದಕರ ಮಂಡಲಿಯನ್ನು ಗೊತ್ತುಮಾಡಿದ್ದಾರೆ. ಸಂಘದ ಅಧ್ಯಕ್ಷರಾದ ಮಾನ್ಯ ಶ್ರೀ ಗೌರಿಶಂಕರ್ ಅವರು ಇದರ ಮೇಲ್ವಿಚಾರಣೆಯನ್ನು ನೋಡಿಕೊಳ್ಳುತ್ತಿದ್ದಾರೆ. ಇಲ್ಲಿಯವರೆಗೆ 19 ಪುಸ್ತಕಗಳು ಪ್ರಕಟವಾಗಿವೆ. ಸದ್ಯಕ್ಕೆ 108 ಪುಸ್ತಕಗಳನ್ನು ಪ್ರಕಟಿಸುವ ಆಲೋಚನೆ ಇದೆ. ನಮ್ಮ ಬಾಂಧವರು ಅವರವರ ಮನೆತನದ ಖ್ಯಾತನಾಮರನ್ನು ಕುರಿತು ಪುಸ್ತಕಗಳನ್ನು ಬರೆದುಕೊಟ್ಟರೆ ಅದು ಸೂಕ್ತವಾಗಿ ಕಂಡಲ್ಲಿ ಪ್ರಕಟಿಸಬಹುದು. ನಮ್ಮ ಸಂಘದಲ್ಲಿ ಈ ಪುಸ್ತಕಗಳನ್ನು ದಯಮಾಡಿ ಕೊಂಡು, ಪ್ರೋತ್ಸಾಹಿಸಿ ಉತ್ತಮ ಪಡಿಸಲು ಸೂಚನೆಗಳನ್ನು ನೀಡಿದರೆ ಮುಂದಿನ ಪ್ರಕಟಣೆಗಳಿಗೆ ಅನುಕೂಲವಾಗುತ್ತದೆ.

ಈ ಪ್ರಯತ್ನವು ಸಫಲವಾಗುವಂತೆ ನಮ್ಮ ಬಾಂಧವರೆಲ್ಲ ಸಹಾಯ ಮಾಡಬೇಕು.

ಈ ಪುಸ್ತಕಗಳೆಲ್ಲವು ನಮ್ಮ ಎಲ್ಲರ ಮನೆಗಳಲ್ಲೂ ಇರಬೇಕೆಂಬುದು ನಮ್ಮ ಉದ್ದೇಶ. ಪ್ರಕಟಣೆಯ ಪ್ರಾಯೋಜಕರಾಗಲು ಎಲ್ಲರಿಗೂ ಅವಕಾಶವಿದೆ.

ದಯಮಾಡಿ ಸಹಕರಿಸಿ.

ಹೊಯ್ಸಳ ಮಾಲೆ - 12

ಆಯುರ್ವೇದ ವಿದ್ವಾನ್
ವೆಂಕಟಸುಬ್ಬಾ ಪಂಡಿತರು

ಎಸ್. ವಿ. ರಾಮಸ್ವಾಮಿ

ಹೊಯ್ಸಳ ಕರ್ನಾಟಕ ಸಂಘ (ರಿ.)
3ನೇ ಅಡ್ಡರಸ್ತೆ, ಹೊಂಬೇಗೌಡನಗರ,
ಬೆಂಗಳೂರು - 560 027

ಮೊದಲ ಮುದ್ರಣ : ಸೆಪ್ಟೆಂಬರ್ 2008

ಬೆಲೆ : ರೂ. **30/-**

ಮುದ್ರಣ :
ಜ್ವಾಲಾಮುಖಿ ಜಾಬ್ ಪ್ರೆಸ್
ಉತ್ಕೃಷ್ಟ ಮುದ್ರಣ ರಾಷ್ಟ್ರ ಪ್ರಶಸ್ತಿ ವಿಜೇತರು
44/1, ಕೆ.ಆರ್.ರಸ್ತೆ, ಬಸವನಗುಡಿ, ಬೆಂಗಳೂರು - 560 004
ಫೋನ್ : 080-26608090, 26617243
www.jwalamukhipress.com

ಒಂದು ಮಾತು

ವಿಜಯನಗರ ಸಾಮ್ರಾಜ್ಯದ ರೂವಾರಿ ವಿದ್ಯಾರಣ್ಯ, ಆದಿಶಂಕರರ ಅವತಾರ ಪುರುಷರೆಂದು ಪ್ರಖ್ಯಾತರಾದ ಶ್ರೀ ಶ್ರೀ ಶ್ರೀ ಚಂದ್ರಶೇಖರೇಂದ್ರ ಸರಸ್ವತಿಯವರ ಪರಂಪರೆಯ ॥ಹೊಯ್ಸಳ ಕರ್ನಾಟಕ॥ ಬ್ರಾಹ್ಮಣ ಜನಾಂಗವು ರಾಜಕೀಯ, ಸಾಮಾಜಿಕ ಹಾಗೂ ಸಂಸ್ಕೃತಿಕ ಕ್ಷೇತ್ರಗಳಲ್ಲಿ ಸೇವೆಯನ್ನು ಸಲ್ಲಿಸಿ ದೇಶ ವಿದೇಶಗಳಲ್ಲಿ ಖ್ಯಾತಿಯನ್ನು ಪಡೆದಿದೆ. ಈ ಪಂಗಡದವರು ರಾಜಕೀಯ, ವಾಣಿಜ್ಯ, ಕೈಗಾರಿಕೆ, ವಿಜ್ಞಾನ, ಸಾಹಿತ್ಯ ಸಂಗೀತ, ಕಲೆ, ವೈದ್ಯಕೀಯ ಹೀಗೆ ಹಲವಾರು ಕ್ಷೇತ್ರಗಳಲ್ಲಿ ಹೆಸರುವಾಸಿಯಾಗಿದ್ದಾರೆ.

ಈ ರೀತಿ ಪ್ರಸಿದ್ಧಿ ಪಡೆದ ಹಿರಿಯ ವ್ಯಕ್ತಿಗಳು ನಮ್ಮ ಯುವಪೀಳಿಗೆಗೆ ಪರಿಚಯಿಸಿ ಅವರಿಗೆ ಚೇತನ ಮತ್ತು ಸ್ಫೂರ್ತಿಯನ್ನು ತುಂಬುವುದೇ ಈ 'ಹೊಯ್ಸಳ ಮಾಲೆ ಯ ಧ್ಯೇಯ'. ಸಂಘದ ಮಾಜಿ ಅಧ್ಯಕ್ಷ ಹಾಗೂ ಹೆಸರಾಂತ ಕೈಗಾರಿಕೋದ್ಯಮಿ ಶ್ರೀ.ಎಂ.ವಿ.ಸತ್ಯನಾರಾಯಣರವರು ಒಂದು ಪುದವಟ್ಟನ್ನು ನಿರ್ಮಿಸಿ ನಮ್ಮ ಸಂಘದ ಮೂಲಕ ಈ ಪುಸ್ತಕ ಮಾಲೆಯನ್ನು ತರಬೇಕೆಂದು ಆಶಿಸಿದರು.

ಹಿರಿಯ ಸಾಹಿತಿಗಳು ಮತ್ತು ಗೌರವಾನ್ವಿತ ಪ್ರೊ. ಜಿ. ವೆಂಕಟಸುಬ್ಬಯ್ಯನವರು ಪ್ರಧಾನ ಸಂಪಾದಕರಾಗಿರುವುದು ನಮ್ಮೆಲ್ಲರ ಸುಕೃತ. ಅವರೊಡನೆ ಮಾರ್ಚ್ 1 ಮತ್ತು 2ರಂದು ಮೈಸೂರಿನಲ್ಲಿ ನಡೆಯುವ ಹೊಯ್ಸಳ ಕರ್ನಾಟಕ ಸಂಘಟನೆಯ ಶತಮಾನೋತ್ಸವ ಸಂದರ್ಭದಲ್ಲಿ ಈ ಮಾಲೆಯ ಮೊದಲ 9 ಪುಸ್ತಕಗಳು ಬಿಡುಗಡೆ ಮಾಡುತ್ತಿರುವುದು ಹೆಮ್ಮೆಯ ಸಂಗತಿ.

ಬೆಂಗಳೂರಿನ ಹೊಯ್ಸಳ ಕರ್ನಾಟಕ ಸಂಘ ಕಳೆದ 64 ವರ್ಷಗಳಿಂದ ನಮ್ಮ ಜನಾಂಗದ ಸೇವೆಯಲ್ಲಿ ತೊಡಗಿದೆ. ನಮ್ಮ ಯುವಕರ ವಿದ್ಯಾಭ್ಯಾಸಕ್ಕೆ ಅನುಕೂಲವಾಗುವಂತೆ ವಿದ್ಯಾರ್ಥಿ ನಿಲಯವನ್ನು ನಡೆಸಲಾಗುತ್ತಿದೆ. ಪ್ರತಿವರ್ಷ ಪ್ರತಿಭಾವಂತ ಮತ್ತು ಆರ್ಥಿಕ ದುರ್ಬಲ ವಿದ್ಯಾರ್ಥಿಗಳಿಗೆ ವೇತನ ನೀಡಲಾಗುತ್ತಿದೆ. ವರ್ಷಂಪ್ರತಿ ನಡೆಯುವ ಸಂಘ ದಿನಾಚರಣೆಯಂದು ನಮ್ಮ ಜನಾಂಗದ ಹಿರಿಯ ವ್ಯಕ್ತಿಗಳು, ಪ್ರತಿಭಾನ್ವಿತ ವಿದ್ಯಾರ್ಥಿಗಳು ಹಾಗೂ ನಾನಾ ಕ್ಷೇತ್ರಗಳಲ್ಲಿ ಪ್ರಶಸ್ತಿ ಪಡೆದ ವ್ಯಕ್ತಿಗಳನ್ನು ಗೌರವಿಸಲಾಗುತ್ತದೆ. ಇಂಥ ಎಲ್ಲಾ ಸಂಘಗಳೊಡನೆ ಕೂಡಿ ಸಹಕರಿಸಲು ನಮಗೆ ತುಂಬಾ ಸಂತಸ.

ನಾಡಿನ ಎಲ್ಲಾ ಹೊಯ್ಸಳ ಕರ್ನಾಟಕ ಸಂಘಟನೆಗಳೂ ಆಗಾಗ್ಗೆ ಕಲೆತು ಅನ್ಯೋನ್ಯತೆಯಿಂದ ಕೆಲಸ ಮಾಡಿ ಜನಾಂಗದ ವಿಶೇಷತೆಗಳನ್ನೂ-ಸಂಸ್ಕೃತಿಯನ್ನು ಉಳಿಸಿ, ಬೆಳೆಸುವುದು ಎಂದಿಗಿಂತ ಇಂದು ಅತ್ಯವಶ್ಯವಾಗಿದೆ.

ಸುಮಾರು 30 ಲಕ್ಷ ರೂ. ಅಂದಾಜಿನ ಈ ಮಾಲೆಯ ಪ್ರಕಟಣಾ ಕಾರ್ಯವು ಸುಸೂತ್ರವಾಗಿ ನಡೆಯಲು ಸಂಘಕ್ಕೆ ಹೊರೆಯಾಗದಂತೆ ಒಂದು ಆವರ್ತ ನಿಧಿಯನ್ನು ಸ್ಥಾಪಿಸಲು ಯೋಜಿಸಲಾಗಿದೆ.

ಒಂದು ಪುಸ್ತಕದ ಮುದ್ರಣ-ಪ್ರಕಟಣದ ವೆಚ್ಚ ಸುಮಾರು 15 ರಿಂದ 20 ಸಹಸ್ರ ರೂ.ಗಳಾಗಬಹುದು. (ನಮ್ಮ ಎಲ್ಲಾ ಬ್ರಾಹ್ಮಣ ವಿದ್ಯಾರ್ಥಿನಿಲಯಗಳಿಗೂ ಈ ಪುಸ್ತಕದ ಕೆಲವು ಪ್ರತಿಗಳನ್ನು ಉಚಿತವಾಗಿ ಕಳಿಸಲು ಯೋಜಿಸಲಾಗಿದೆ). ನಮ್ಮ ಎಲ್ಲಾ ಬಾಂಧವರೂ ಈ ಯೋಜನೆಯ ಯಶಸ್ಸಿಗೆ ಕೆಳಕಂಡಂತೆ ಸಹಾಯ ಮಾಡಬಹುದು.

1. ಒಂದು ಅಥವಾ ಹೆಚ್ಚು ಪುಸ್ತಕಕ್ಕೆ ಪ್ರಾಯೋಜಕರಾಗಬಹುದು. ಪ್ರಾಯೋಜಕರ ಹೆಸರನ್ನು ಆಯಾ ಪುಸ್ತಕಗಳಲ್ಲಿ ಪ್ರಕಟಿಸಲಾಗುವುದು.

2. ಒಂದು ಕುಟುಂಬದಿಂದ ಅಥವಾ ಇಬ್ಬರು ಮೂವರೂ ಸೇರಿ ಒಂದು ಅಥವಾ ಹೆಚ್ಚು ಪುಸ್ತಕಗಳ ಪ್ರಾಯೋಜಕರಾಗಬಹುದು.

3. ಪುಸ್ತಕಗಳನ್ನು ಕೊಂಡು ನಿಮ್ಮ ಮನೆಯಲ್ಲಿ ನಡೆಯುವ ಸಮಾರಂಭಗಳಲ್ಲಿ ಬಂಧು ಬಾಂಧವರಿಗೆ ಹಂಚುವುದು.

4. ಈ ಉದ್ದೇಶಕ್ಕಾಗಿ ದೇಣಿಗೆ ನೀಡುವುದು.

5. ಈ ಮಾಲೆಯ ಬಗ್ಗೆ ನಿಮ್ಮ ಬಂಧುಗಳಿಗೆ ತಿಳಿಸಿ ಅವರೂ ಈ ಕಾರ್ಯಗಳಲ್ಲಿ ನೆರವಾಗಲು ಪ್ರೇರೇಪಿಸುವುದು. ಪುಸ್ತಕದ ಮಾರಾಟ ಮತ್ತು ನಿಮ್ಮ ನೆರವು ಪ್ರೋತ್ಸಾಹದಾಯಕವಾದರೆ ಸಂಘ ಪ್ರತಿ ಎರಡು ತಿಂಗಳಿಗೊಮ್ಮೆ 8 ರಿಂದ 12 ಪುಸ್ತಕಗಳನ್ನು ಪ್ರಕಟಿಸಲು ಶಕ್ತವಾಗಿದೆ ಎಂದು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

ಈ ಪುಸ್ತಕ ಮಾಲೆಯನ್ನು ಮುದ್ರಿಸಲು ಅತ್ಯಂತ ಅತಿಶ್ರದ್ಧೆಯಿಂದ ಈ ಕಾರ್ಯವನ್ನು ನೆರವೇರಿಸುತ್ತಿರುವ ನಮ್ಮವರೇ ಆದ ಜ್ವಾಲಾಮುಖಿ ವಾರಪತ್ರಿಕೆಯ ಸಂಸ್ಥಾಪಕ ದಿ. ಸಿ.ಎಸ್. ಸತ್ಯ ಇವರ ಮಕ್ಕಳಾದ ಶ್ರೀಯುತ. ಶಿವಕುಮಾರ್, ರವಿಪ್ರಸಾದ್ ಮತ್ತು ಶಂಕರ್ ಇವರಿಗೆ ಸಂಘ ಆಭಾರಿಯಾಗಿದೆ.

ನಮ್ಮ ಕೋರಿಕೆಯನ್ನು ಮನ್ನಿಸಿ ವಿಷಯಗಳನ್ನು, ಉಪಯುಕ್ತಮಾಹಿತಿಗಳನ್ನು ಪೋಟೋಗಳನ್ನ ಸಂಗ್ರಹಿಸಿ ಅಂದವಾಗಿ ಈ ಪುಸ್ತಕವನ್ನು ಸಿದ್ಧಪಡಿಸಿರುವ ನಮ್ಮ ಆತ್ಮೀಯ ಲೇಖಕರಿಗೂ, ತಮ್ಮ ಬಿಡುವಿಲ್ಲದ ಕಾರ್ಯಕ್ರಮಗಳ ನಡುವೆ ದಣಿವನ್ನೂ ಲೆಕ್ಕಿಸದೆ ಉತ್ಸಾಹದ ಚಿಲುಮೆಯಾಗಿ ನಮಗೆ ಮಾರ್ಗದರ್ಶನ ಮಾಡುತ್ತಿರುವ ಪ್ರಧಾನ ಸಂಪಾದಕರಾದ ಪ್ರೊ.ಜಿ.ವೆಂಕಟಸುಬ್ಬಯ್ಯ ರವರಿಗೆ ಸಂಪಾದಕರ ಮಂಡಳಿಯ ಎಲ್ಲಾ ಸದಸ್ಯರಿಗೆ ಹಾಗೂ ಸಂಚಾಲಕರಾಗಿ ಕಾರ್ಯನಿರ್ವಹಿಸುತ್ತಿರುವ ಈ ಸಂಘದ ಮಾಜಿ ಅಧ್ಯಕ್ಷ ಶ್ರೀ.ಎಂ.ವಿ.ಸತ್ಯನಾರಾಯಣರವರಿಗೆ ನಮ್ಮ ಕೃತಜ್ಞತೆಗಳು.

ಅರೆಕೆರೆ ಗೌರಿಶಂಕರ

ಅಧ್ಯಕ್ಷರು

ಹೊಯ್ಸಳ ಕರ್ನಾಟಕ ಸಂಘ(ರಿ.)

ಬೆಂಗಳೂರು-27

ಮುನ್ನುಡಿ

ಒಮ್ಮೆ ನಾನು ಶ್ರೀ ಎಂ.ವಿ. ಸತ್ಯನಾರಾಯಣ ಅವರೊಡನೆ ಮಾತನಾಡುತ್ತ ಇದ್ದಾಗ ಅವರು ''ನಮ್ಮ ಹೊಯಿಸಳ ಕರ್ನಾಟಕ ಪಂಗಡದ ಹಿಂದಿನ ಹಿರಿಯ ವ್ಯಕ್ತಿಗಳಲ್ಲಿ ಪ್ರಸಿದ್ಧರಾಗಿದ್ದು ಅನೇಕ ಸಾಧನೆಗಳನ್ನು ಮಾಡಿದವರ ಬಗ್ಗೆ ಏನಾದರೂ ಚಾರಿತ್ರಿಕ ವಿವರಗಳಿವೆಯೊ?'' ಎಂದು ಕೇಳಿದರು. ಈ ಬಗ್ಗೆ ನಾನು ಅನೇಕ ದಿನಗಳಿಂದ ಚಿಂತನೆ ಮಾಡುತ್ತಿದ್ದೆ. ಸಾಧ್ಯವಾದರೆ ಶಾಸನಗಳ ಮತ್ತು ಪ್ರಾಚೀನ ಸಾಹಿತ್ಯದ ಆಧಾರಗಳಿಂದ ಒಂದು ಪ್ರಬಂಧವನ್ನು ಬರೆಯಬೇಕೆಂದು ಕೆಲವು ವಿಷಯಗಳನ್ನು ಸಂಗ್ರಹಿಸಿದ್ದೆ.

'ಹೊಯ್ಸಳ' ಎಂಬ ಶಬ್ದವು ದೇಶವಾಚಕವಾದದ್ದು. ಅದು 'ಪೊಯಿಸಣ' ಎಂಬ ಶಬ್ದದ ಈಗಿನ ರೂಪ. ಶಾಸನಗಳಲ್ಲಿ 'ಪೊಯಿಸಣನಾಡು' ಎಂಬ ಉಲ್ಲೇಖವಿದೆ. ಮುದ್ರಾಮಂಜೂಷವನ್ನು ರಚಿಸಿದ ಕೆಂಪುನಾರಾಯಣನು ತಾನು 'ಪೊಯಿಸಣಿಗ' ಕುಲದವನು ಎಂದು ಹೇಳಿಕೊಂಡಿದ್ದಾನೆ. ಅವನ ಕಾಲ 1830. ನಾವೆಲ್ಲ ನಮ್ಮನ್ನು ಕರ್ನಾಟಕರು, ಕನ್ನಡಿಗರು, ಕನ್ನಡ ಕುಲಕ್ಕೆ ಸೇರಿದವರು ಎಂದು ಹೇಳಿಕೊಂಡಿರುವುದಕ್ಕೆ ಆಧಾರವಿದೆ. ಈ ವಿಚಾರವನ್ನು ಹಿಂದೆ ಪ್ರಕಟವಾದ ಹೊಯ್ಸಳ ಕರ್ನಾಟಕ ಸಂಘದ ರಜತ ಮಹೋತ್ಸವ ಸಂಪುಟದಲ್ಲಿ ಪ್ರಕಟಿಸಲಾಗಿದೆ.

ಅನೇಕ ದಾನ ಶಾಸನಗಳು ಹೊಯಿಸಳ ಕರ್ನಾಟಕರ ಮನೆತನಗಳಲ್ಲಿ ಈಗಲೂ ಕಾಣಬರುತ್ತವೆ. ಈ ಗುಂಪಿನ ಜನರಲ್ಲಿ ಅನೇಕ ವಿದ್ವಾಂಸರು, ಪ್ರಸಿದ್ಧ ವೈದ್ಯರು, ಪರಿಣತರಾದ ಸಂಗೀತಗಾರರೂ, ವಾದ್ಯ ನಿಪುಣರು ಇದ್ದರು. ಈ ಬಗ್ಗೆ ಚಾರಿತ್ರಿಕವಾಗಿ ಯಾವ ದಾಖಲೆಯೂ ಆಗದೆ ಎಲ್ಲ ಕತ್ತಲೆಯಲ್ಲಿ ಮುಳುಗಿಹೋಗಿದೆ. ಸಂಶೋಧನೆ ಮಾಡಿದರೆ ಅನೇಕ ವಿಷಯಗಳು ದೊರೆಯುತ್ತವೆ. ನಾನು ಈ ಬಗ್ಗೆ ಕೆಲವು ವಿವರಗಳನ್ನು ಶ್ರೀ ಸತ್ಯನಾರಾಯಣ ಅವರಿಗೆ ನೀಡಿದೆ. ಅವರು ''ಈಗಲಾದರೂ ನಾವು ನಮಗೆ ದೊರಕುವಷ್ಟು ವಿವರಗಳನ್ನು ಸಂಗ್ರಹಿಸಿ ವಿವಿಧ ವಿದ್ವಾಂಸರ, ಸಂಗೀತಗಾರರ, ವೈದ್ಯರ, ಪುರಾಣಿಕರ, ಪ್ರವಚನಕಾರರ ಬಗ್ಗೆ ಸಣ್ಣ ಸಣ್ಣ ಪುಸ್ತಕಗಳನ್ನು ಪ್ರಕಟಿಸೋಣ.

ಮುಂದೆ ಸಂಶೋಧನೆಗಳಿಂದ ಹೆಚ್ಚು ವಿವರಗಳು ದೊರಕಿದರೆ ಅದನ್ನು ಪ್ರಕಟ ಮಾಡೋಣ. ಇಂಥ ಕೆಲಸಕ್ಕೆ ನಾನು ಒಂದು ಲಕ್ಷ ರೂಪಾಯಿಗಳ ಒಂದು ದತ್ತಿಯನ್ನು ನೀಡುತ್ತೇನೆ. 'ಹೊಯ್ಸಳಮಾಲೆ' ಎಂಬ ಹೆಸರಿನಲ್ಲಿ ಈ ಪುಸ್ತಕಗಳು ಪ್ರಕಟವಾಗಲಿ. ನೀವು ಈ ಮಾಲೆಯ ಪ್ರಧಾನ ಸಂಪಾದಕರಾಗಿ ಕಾರ್ಯವನ್ನು ನಡೆಸಿಕೊಡಬೇಕು'' ಎಂದು ನಿರ್ಧಾರವಾಗಿ ಹೇಳಿಬಿಟ್ಟರು. ಈ ಕೆಲಸಕ್ಕಾಗಿ ಕೂಡಲೇ ಒಂದು ಸಂಪಾದಕ ಮಂಡಲಿಯನ್ನು ರಚಿಸಿಬಿಟ್ಟರು. ಆ ಮಂಡಲಿಯ ಸ್ವರೂಪ ಹೀಗಿತ್ತು:

1. ಪ್ರೊ. ಜಿ. ವೆಂಕಟಸುಬ್ಬಯ್ಯ, ಪ್ರಧಾನ ಸಂಪಾದಕರು
2. ಶ್ರೀ ಗರುಡನಗಿರಿ ನಾಗರಾಜ, ಸದಸ್ಯರು
3. ಶ್ರೀ ಬಿ.ಜಿ. ಶ್ರೀರಂಗಯ್ಯ, ಸದಸ್ಯರು
4. ಶ್ರೀ ಬಿ.ಎನ್. ಅನಂತನಾರಾಯಣ, ಸದಸ್ಯರು
5. ಶ್ರೀಮತಿ ಶಾರದಾ ಶಾಮಣ್ಣ, ಸದಸ್ಯರು
6. ಶ್ರೀ ಎ.ವಿ. ಸತ್ಯನಾರಾಯಣ, ಸಂಚಾಲಕರು

ಈ ಸಭೆಯು ಸೇರಿ ಒಂದು ಕಾರ್ಯಕ್ರಮವನ್ನು ನಿರ್ಧಾರ ಮಾಡಿದೆ.

ಮೊದಲಿಗೆ ಕಿಂಚಿತ್‌ಪೂರ್ವದಲ್ಲಿ ಬದುಕಿದ್ದ ಹಿರಿಯರಲ್ಲಿ ಹತ್ತು ಜನರನ್ನು ಗುರುತಿಸಿ ಅವರ ಬಗ್ಗೆ ತಿಳಿವಳಿಕೆಯುಳ್ಳವರಿಂದ 1/8 ಡೆಮ್ಮಿ, 64 ಪುಟಗಳ ಪುಸ್ತಕಗಳನ್ನು ಬರೆಯಿಸಬೇಕು. ಹೀಗೆ ಈ ಮಾಲೆಗೆ ಪುಸ್ತಕಗಳನ್ನು ರಚಿಸುವವರು ತಮ್ಮ ಬರವಣಿಗೆಯಲ್ಲಿ ಸತ್ಯಕ್ಕೆ ಅಪಚಾರವಾಗದ ಹಾಗೆ, ಯಾವ ವಿರೋಧವನ್ನು ಸೃಷ್ಟಿಸಿದ ಹಾಗೆ, ಯಾವ ಅನುಮಾನಗಳಿಗೂ ಅವಮಾನಗಳಿಗೂ ಅವಕಾಶವಾಗದ ಹಾಗೆ, ಅತಿಉತ್ಪ್ರೇಕ್ಷೆಯಾಗಲಿ, ಅತಿ ಸಂಕೋಚ ಪ್ರವೃತ್ತಿಯಾಗಲಿ ಇರದಂತೆ ಬರೆಯಬೇಕು. ಅತ್ಯುಕ್ತಿಯು ಓದುಗರಿಗೆ ಬೇಸರವನ್ನುಂಟುಮಾಡುತ್ತದೆ. ಅತಿ ಸಂಕೋಚ ವ್ಯಕ್ತಿಗೆ ಅಪಚಾರವಾಗುತ್ತದೆ. ಆದುದರಿಂದ ಬರವಣಿಗೆಯು ಸುವರ್ಣ ಮಧ್ಯಮದಲ್ಲಿ ಪ್ರಸನ್ನತೆಯನ್ನು ಗಾಂಭೀರ್ಯವನ್ನು ಉಂಟುಮಾಡುವಂತೆ ನೋಡಿಕೊಳ್ಳಬೇಕೆಂದು ಬರಹಗಾರರಿಗೆ ತಿಳಿಸಬೇಕು. ವ್ಯಕ್ತಿಗಳ ಸಾಧನೆಯನ್ನು ಹಿರಿಮೆಯನ್ನು ಎತ್ತಿ ತೋರಿಸಬೇಕು ಎಂದು ತೀರ್ಮಾನಿಸಲಾಯಿತು.

ಇಷ್ಟೆಲ್ಲ ಪೂರ್ವಸಿದ್ಧತೆಯಿಂದ ಈಗ ಪ್ರಕಟವಾಗಿರುವ ಪುಸ್ತಕಗಳು ರಚಿತವಾಗಿವೆ. ಇವು ಹೊಯ್ಸಳ ಕರ್ನಾಟಕ ಯುವಕ ಯುವತಿಯರ ಭವಿಷ್ಯಕ್ಕೆ ಮಾರ್ಗದರ್ಶಕವಾಗಬೇಕು. ಇತರ ಉದಯೋನ್ಮುಖರಿಗೂ ಆಸಕ್ತಿಯನ್ನು ಕೆರಳಿಸುವಂತಿರಬೇಕು. ಈ ಪುಸ್ತಕಗಳನ್ನು ಓದುವವರು ಇವುಗಳ ಪ್ರಕಟಣೆಯಲ್ಲಿ ಏನಾದರೂ ವಿಶೇಷ ವಿಷಯಗಳು ಇರಬೇಕೆಂದು ಬಯಸಿದರೆ ಆ ವಿವರಗಳನ್ನು ನಮಗೆ ತಿಳಿಸಿದರೆ ಅಂಥ ಎಲ್ಲ ಸಲಹೆಗಳಿಗೂ ಸ್ವಾಗತವಿದೆ ಎಂದು ಹೇಳಬಯಸುತ್ತೇವೆ.

'ಹೊಯ್ಸಳ ಮಾಲೆ'ಗೆ ಪುಸ್ತಕಗಳನ್ನು ರಚಿಸಿದವರಿಗೆಲ್ಲ ನಮ್ಮ ವಂದನೆಗಳು. ಈ ಮಾಲೆಯ ಪುಸ್ತಕಗಳನ್ನು ಮುದ್ರಣಕ್ಕೆ ಸಿದ್ಧಮಾಡುತ್ತಿದ್ದಾಗ ನನ್ನ ಪುಸ್ತಕ ಭಂಡಾರದಲ್ಲಿ ಎಲ್ಲೋ ಮುಚ್ಚಿಟ್ಟುಕೊಂಡಿರುವ ವಿವರಗಳನ್ನು ಹುಡುಕಿ ಸಮಯಕ್ಕೆ ಸರಿಯಾಗಿ ನನಗೆ ಸಹಾಯ ಮಾಡಿದ ನನ್ನ ಕಿರಿಯ ಮಗ ಚಿ|| ಜಿ.ವಿ. ಅರುಣನಿಗೆ ಶುಭವನ್ನು ಕೋರುತ್ತೇನೆ.

ಹೊಯಿಸಳ ಕರ್ನಾಟಕ ಬಂಧುಗಳು ಈ ಮಾಲೆಗೆ ಎಲ್ಲ ಬೆಂಬಲವನ್ನು ನೀಡಿ, ಈ ಮಾಲೆ ನೂರನ್ನು ದಾಟಲಿ ಎಂದು ಹರಸಿ ಸಹಕರಿಸಬೇಕೆಂದು ವಿನಂತಿಸುತ್ತೇನೆ.

ಹೊಯ್ಸಳ ಮಾಲೆಯ ಎರಡನೆಯ ಕಂತಿನ ಹತ್ತು ಪುಸ್ತಕಗಳನ್ನು ಈಗ ಪ್ರಕಟಿಸುತ್ತಿದ್ದೇವೆ. ಇವುಗಳಲ್ಲಿ ಚಿತ್ರಿತರಾಗಿರುವ ನಮ್ಮ ಪಂಗಡದ ಎಲ್ಲರೂ ಹಿರಿಯರೇ ಮತ್ತು ಪ್ರಸಿದ್ಧರೇ. ಹಿಂದಿನವರ ಬಗ್ಗೆ ವಿಷಯಗಳನ್ನು ಹುಡುಕಿ ಶೇಖರಿಸುವುದು ಸುಲಭದ ಕೆಲಸವಲ್ಲ. ಈ ಕಾರ್ಯವನ್ನು ಮಾಡಲು ಈ ಪುಸ್ತಕಗಳ ಲೇಖಕರು ತುಂಬಾ ಶ್ರಮಪಟ್ಟಿದ್ದಾರೆ. ಆ ಎಲ್ಲ ಶ್ರಮವೂ ಸತ್ಫಲವನ್ನು ನೀಡಿದೆ. ಹೀಗೆ ವಿಶೇಷ ಆಸಕ್ತಿಯನ್ನು ವಹಿಸಿ ಈ ಪುಸ್ತಕಗಳನ್ನು ರಚಿಸಿರುವ ಎಲ್ಲ ಲೇಖಕ-ಲೇಖಕಿಯರಿಗೂ ನಾವು ಕೃತಜ್ಞರಾಗಿದ್ದೇವೆ.

ಈ ಪುಸ್ತಕಗಳನ್ನು ಓದುವ ನಮ್ಮ ಪಂಗಡದ ಎಲ್ಲರೂ ತಮ್ಮ ತಮ್ಮ ಪೂರ್ವಿಕರಲ್ಲಿ ಹೀಗೆ ಬಾಳಿ ಸತ್ಕಾರ್ಯಗಳನ್ನು ಮಾಡಿರುವವರು ನೆನಪಿಗೆ ಬಂದರೆ ಅವರ ಬಗ್ಗೆಯೂ ಆಧಾರಸಹಿತ ವಿವರಗಳನ್ನು ನಮಗೆ ಕಳಿಸಿಕೊಡಬೇಕಾಗಿ ವಿನಂತಿ. ಅಂಥ ಎಲ್ಲ ಹಿರಿಯರನ್ನೂ ನಾವು ನಮ್ಮವರಿಗೆಲ್ಲ ಪರಿಚಯ ಮಾಡಿಕೊಡೋಣ.

ಆಯುರ್ವೇದ ವಿದ್ವಾನ್ ವೆಂಕಟಸುಬ್ಬಾ ಪಂಡಿತರು (1887-1963) ಹಳೆಯ ಮೈಸೂರು ಸಂಸ್ಥಾನದಲ್ಲಿ ಅವರ ವೃತ್ತಿಯಲ್ಲಿ ಅನೇಕ ಕಡೆಗಳಲ್ಲಿ ಸೇವೆಯನ್ನು ಸಲ್ಲಿಸಿದ ಪ್ರಸಿದ್ಧ ವೈದ್ಯರು. ಕೆಲವು ರೋಗಗಳಿಗೆ ಅವರು ವಿಶಿಷ್ಟವಾದ ಪರಿಹಾರೋಪಾಯಗಳನ್ನು ಕಂಡು ಹಿಡಿದು ಸ್ವಂತಸಂಶೋಧನೆಯಲ್ಲಿ ನಿರತರಾಗಿದ್ದರು. ಇತರರ ರೋಗನಿದಾನ ಕ್ರಮಗಳನ್ನು ಪರಿಶೀಲಿಸಿ ಬೇಕಾದ ವ್ಯತ್ಯಾಸಗಳನ್ನು ಅಳವಡಿಸಿ ಹೊಸ ಚಿಕಿತ್ಸೆಯ ಕ್ರಮಗಳನ್ನು ನಿರ್ಮಾಣ ಮಾಡಿಕೊಂಡಿದ್ದರು. ಸ್ವಂತ ಡೈರಿಯಲ್ಲಿ ತಾವು ಮಾಡಿದ ಚಿಕಿತ್ಸೆಗಳನ್ನು ಇತರ ವಿವರಗಳನ್ನು ಗುರುತು ಹಾಕಿದ್ದಾರೆ. ಅವರ ಡೈರಿಯ ಕೆಲವು ಭಾಗಗಳನ್ನು ಈ ಪುಸ್ತಕದಲ್ಲಿ ಸೇರಿಸಲಾಗಿದೆ. ಇದು ಒಬ್ಬ ವೈದ್ಯರ ಕತೆಯಲ್ಲ. ಇದು ಆ ಕಾಲದ ಸಾರ್ವಜನಿಕ ವ್ಯವಸ್ಥೆಯ ಚಿತ್ರ. ಆದ್ದರಿಂದ ವಿವರವಾಗಿ ಚಿತ್ರಿಸುವ ಬರವಣಿಗೆ ಇದು.

ಈ ಪುಸ್ತಕವನ್ನು ರಚಿಸಿಕೊಟ್ಟಿರುವವರು ಅವರ ಮಗ ಪ್ರೊ. ಎಸ್.ವಿ. ರಾಮಸ್ವಾಮಿ ಅವರು. ಅವರು ಮೈಸೂರು ಸಂಸ್ಥಾನದ ಅನೇಕ ಕಾಲೇಜುಗಳಲ್ಲಿ ಗಣಿತಶಾಸ್ತ್ರದ ಪ್ರಾಧ್ಯಾಪಕರಾಗಿ ಅತ್ಯಂತ ವಿದ್ಯಾರ್ಥಿಪ್ರಿಯ ವ್ಯಕ್ತಿ ಎಂದು ಹೆಸರು ಪಡೆದವರು. ನಿವೃತ್ತರಾದ ಮೇಲೆ ಅವರು ನಡೆಸುತ್ತಿದ್ದ ಖಾಸಗಿ ತರಗತಿಗಳಿಗೆ ಪ್ರವೇಶ ಸಿಗುವುದು ಕಷ್ಟವಾಗಿತ್ತು. ಈಗ ಹೃದಯದ ಶಸ್ತ್ರ ಚಿಕಿತ್ಸೆ ಹೊಂದಿ ಆರೋಗ್ಯವಾಗಿ ಪರೋಪಕಾರಿಗಳಾಗಿ ಬೆಂಗಳೂರಿನ ಬಸವೇಶ್ವರನಗರದಲ್ಲಿ ವಾಸಿಸುತ್ತಿದ್ದಾರೆ. ಅವರಿಗೆ ನಮ್ಮ ಕೃತಜ್ಞತೆಗಳು.

ಜಿ. ವೆಂಕಟಸುಬ್ಬಯ್ಯ
ಸಂಪಾದಕ ಮಂಡಲಿಯ ಪರವಾಗಿ

ನಂ. 58, 31ನೇ ಕ್ರಾಸ್, 7ನೇ ಬ್ಲಾಕ್, ಜಯನಗರ
ಬೆಂಗಳೂರು–560 070.
1–3–2008

ಬಿನ್ನಹ

'ನಿಮ್ಮ ತಂದೆಯವರನ್ನು ಕುರಿತು ಹೊಯ್ಸಳ ಮಾಲೆಗೆ ಒಂದು ಕಿರುಪುಸ್ತಕ ಬರೆದು ಕೊಡು' ಎಂದು ಪೂಜ್ಯ ಜಿ.ವಿ. ಅವರು ಹೇಳಿದಾಗ ಸಂತೋಷದಿಂದ ಸಮ್ಮತಿಸಿದೆ.

ಹಿರಿಯರಾದ ನಮ್ಮ ತಾಯಿಯವರಿಂದ, ಸ್ವತಃ ವೈದ್ಯರಾದ ಇಬ್ಬರು ಸೋದರರಿಂದ ನಮ್ಮ ತಂದೆಯವರ ವೃತ್ತಿ ಜೀವನದ ರೋಚಕ ಪ್ರಸಂಗಗಳನ್ನು ತಿಳಿಸಿದ್ದೆ.

ನಮ್ಮ ತಂದೆಯವರು ಇಟ್ಟಿದ್ದ 'ವೈದ್ಯಶಾಲೆಗೆ ಭೇಟಿ ಇತ್ತವರ ಬರೆಹದ ಪುಸ್ತಕ' ಹಾಗೂ ಅವರ ಕೈ ಬರೆಹದ ಪುಸ್ತಕ, ನೆನಪಿನ ಕುರುಹಾಗಿ, ನಮ್ಮ ಅಣ್ಣನವರಿಂದ ನನಗೆ ಬಂದಿದೆ.

ಒಮ್ಮೆ ಹಿರಿಯರಾದ ಮಂಡ್ಯದ ನ್ಯಾಯವಾದಿ ದಿವಂಗತ ಕೈಗೋನ ಹಳ್ಳಿ ಲಕ್ಷ್ಮೀನಾರಾಯಣರು, ''ನಿಮ್ಮ ವಂಶ ಎಂಥದ್ದು ಎಂದು ನಿನಗೆ ಗೊತ್ತೇನೊ, ಮಗು!'' ಎಂದು ನನ್ನ ಪೂರ್ವಜರ ಹಿರಿಮೆಯನ್ನು ಅವರದೇ ಆದ ಅಮೋಘ ಶೈಲಿಯಲ್ಲಿ ಕಣ್ಣಿಗೆ ಕಟ್ಟುವಂತೆ ನಿರೂಪಿಸಿ, ಹೆಮ್ಮೆ ಪಡುವಂತೆ ಮಾಡಿದ್ದರು.

ಇವೆಲ್ಲದರ ಜೊತೆಗೆ ನನಗಿದ್ದ ಸುಮಾರು ನಾಲ್ಕು ದಶಕಗಳ ಸಾಮೀಪ್ಯ - ಅನುಭವಗಳು, ಈ ಕಿರು ಹೊತ್ತಿಗೆಯ ರಚನೆಗೆ ಸಹಾಯ ಆಗಿವೆ.

ಹೊಯ್ಸಳ ಕರ್ಣಾಟಕ ಸಂಘದ ಅಧಿಕಾರವರ್ಗಕ್ಕೆ ಹೊಯ್ಸಳ ಮಾಲಿಕೆಯ ಸಂಪಾದಕರ ಮಂಡಳಿಗೆ ಹಾಗೂ ಪ್ರಕಟಣೆಯಲ್ಲಿ ಪಾತ್ರರಾಗಿರುವ ಎಲ್ಲ ಜನರಿಗೆ ನನ್ನ ಕೃತಜತೆಯನ್ನು ಅರ್ಪಿಸುತ್ತೇನೆ.

ಎಸ್. ವಿ. ರಾಮಸ್ವಾಮಿ

ಆಯುರ್ವೇದ ವಿದ್ವಾನ್ ವೆಂಕಟಸುಬ್ಬಾ ಪಂಡಿತರು

ಮೈಸೂರು ಸಂಸ್ಥಾನದಲ್ಲಿ ಸರ್ಕಾರಿ ಆಸ್ಪತ್ರೆಗಳು ತಲೆಯೆತ್ತುವುದಕ್ಕೆ ಮುನ್ನ ನಾಡಿನಾದ್ಯಂತ ಅನೇಕ ಆಯುರ್ವೇದ ವೈದ್ಯ ಮನೆತನಗಳಿದ್ದವು. ನೆಗಡಿ, ಕೆಮ್ಮು ಮುಂತಾದ ಸಣ್ಣ ರೋಗಗಳಿಗೆ ಹಿರಿಯರು ಹೇಳುವ 'ಮನೆಮದ್ದು' ಶಮನ ಕೊಡುತ್ತಿತ್ತು. ವೈದ್ಯರ ಆವಶ್ಯಕತೆ ಇರುತ್ತಿರಲಿಲ್ಲ.

ಇಂತಹ ವೈದ್ಯ ಮನೆತನಗಳಲ್ಲಿ ವೈದ್ಯ ಗ್ರಂಥಗಳು ಕಂಠಪಾಠವಾಗಿ ಪೀಳಿಗೆಯಿಂದ ಪೀಳಿಗೆಗೆ ಹರಿಯುತ್ತಿತ್ತು. ಓಲೆಗರಿಯಲ್ಲಿಯೂ ಕೆಲವು ಮನೆಗಳಲ್ಲಿ ದೊರೆಯುತ್ತ ಇದ್ದವು. ಸರಕಾರಿ ಆಸ್ಪತ್ರೆಗಳು ತಲೆಯೆತ್ತಿದಾಗ ಈ ಮನೆತನದವರು, ಬೇರೆ ಉದ್ಯೋಗಗಳನ್ನು ಹುಡುಕಿಕೊಂಡರು.

ಶ್ರೀ ಶೈಲದಿಂದ ಅರಸರ ಜೊತೆ ಬಂದ ಹೊಯ್ಸಳ ಕರ್ನಾಟಕ ಕುಟುಂಬಕ್ಕೆ ಕೈಗೋನಹಳ್ಳಿ* ಜೋಡೀ ಗ್ರಾಮವು ಅರಸರಿಂದ ಅನುಗ್ರಹವಾಗಿತ್ತು. ಈ ಮೂಲದ ಜನ ಕವಲೊಡೆದು ಮಾಗಡಿ, ಚನ್ನರಾಯಪಟ್ಟಣ ಮೂಡಗೆರೆ ಮುಂತಾದ ಸ್ಥಳಗಳಲ್ಲಿ ವೃತ್ತಿ ಮುಂದುವರಿಸಿದ್ದರು.

ಚನ್ನರಾಯಪಟ್ಟಣದಲ್ಲಿ ಸಿ.ವಿ. ಪಂಡಿತನೆಂಬ ಬಾಲಕ ಬೀದಿಯಲ್ಲಿ ಮಣ್ಣಿನಲ್ಲಿ ಆಟ ಆಡುತ್ತಿದ್ದನು. ಅದನ್ನು ನೋಡಿದ ಮುಸ್ಲಿಮರಿಬ್ಬರು 'ಆನೆಯ ಹೊಟ್ಟೆಯಿಂದ ಬಿದ್ದ ಲದ್ದಿ' ಎಂದು ಮಾತನಾಡಿದರು. ಮಾತು ಮಗುವಿನ ಮನಸ್ಸು ಕುಟುಕಿತು. ಓಡಿ ತಾಯಿಗೆ ದುಂಬಾಲು ಬಿದ್ದನು. 'ಅಮ್ಮಾ ನನಗೆ ಮುಂಜಿ ಮಾಡು, ನನ್ನನ್ನು ಓದಿಸು, ನಾನು ಅಪ್ಪನಂತೆ ಪಂಡಿತನಾಗಬೇಕು.'

ಆಕೆಯ ಉದ್ದಾಮ ಪಂಡಿತನಾದ ಪತಿ ಅಕಾಲ ಮೃತ್ಯುವಿಗೆ ಈಡಾಗಿ, ದಿಕ್ಕು ತಪ್ಪಿದ್ದಳು. ಒಬ್ಬನೇ ಮಗ. ಅವನಿಗೆ ತಿಳಿವಳಿಕೆಯಾದದ್ದು ಆಕೆಗೂ ಇಷ್ಟವೆ. ಊರಿನಲ್ಲಿದ್ದ ಹಿರಿಯರಲ್ಲಿ ಪ್ರಸ್ತಾಪಿಸಿದಳು. ಕಾರ್ಯನಿಮಿತ್ತ ಕೈಗೋನಹಳ್ಳಿಯಿಂದ ಬಂದಿದ್ದ ಜೋಡಿದಾರರ ಗಮನಕ್ಕೆ ಈ ಸಂಗತಿ ಬಂದಿತು. ಆಕೆಯನ್ನು ಕರೆಸಿಕೊಂಡ ಅವರು 'ತಾಯಿ ನೀನು ನನಗೆ ಸಂಬಂಧಿ, ಯಾರೂ ದಿಕ್ಕಿಲ್ಲ ಎಂದುಕೊಳ್ಳಬೇಡ. ಕೈಗೋನಹಳ್ಳಿಗೆ ಬಂದು ಬಿಡು. ಮುಂದಿನದು ದೈವೇಚ್ಛೆ' ಎಂದು ಹಳ್ಳಿಗೆ ಬರಮಾಡಿಕೊಂಡರು. ವಾಸಿಸಲು ನೆಲೆಕೊಟ್ಟರು. ಹುಡುಗನಿಗೆ ಉಪನಯನ ಆಯಿತು

---

* ಕೈಗೋನಹಳ್ಳಿಯು ಕೆ.ಆರ್. ಪೇಟೆ ತಾಲೂಕಿನ ಗ್ರಾಮ

ಬಾಲಕನಿಗೆ ಸೂಕ್ತ ವಿದ್ಯಾಭ್ಯಾಸ, ಸಂಸ್ಕೃತ ಶ್ಲೋಕಗಳ ಮತ್ತು ಇತರ ಗ್ರಂಥಗಳ ಶ್ಲೋಕಗಳ ಕಂಠಪಾಠ ಜೋಡಿದಾರರ ಮನೆಯಲ್ಲಿಯೇ ನಡೆಯಿತು. ಜೋಡಿದಾರರು ಪರಿಣತ ವೈದ್ಯರೂ ಸಂಸ್ಕೃತ ಜ್ಞಾನಿಗಳೂ ಆಗಿದ್ದು ಅವರ ಮಗನೂ ತಂದೆಯ ಶಿಷ್ಯನಾಗಿ ಪಂಡಿತರಾಗಿದ್ದರು. ಬೇಬಿ ಬೆಟ್ಟದ ಪಂಡಿತರೆಂದು ಖ್ಯಾತರಾದ ವೈದ್ಯರಲ್ಲಿ ಸಿ.ವಿ. ಪಂಡಿತನನ್ನು** ಮುಂದಿನ ವಿದ್ಯಾಭ್ಯಾಸಕ್ಕೆ ಕಳುಹಿಸಿದರು. ಅವನು ಬಲು ಶ್ರದ್ಧೆಯಿಂದ ಕಲಿತು. ವೈದ್ಯವಿದ್ಯಾ ಪರಿಣಿತನೆನಿಸಿಕೊಂಡನು.

ಜೋಡೀದಾರರಿಗೆ ವೈದ್ಯ ಪುತ್ರನಲ್ಲದೆ, ಸುರೂಪಿಯಾದ ಮಗಳು ಇದ್ದಳು. ಮಗಳು ಕಣ್ಣುಮುಂದೆಯೆ ಇರಲಿ ಎಂದು ಆಸೆ. ತಾಯಿ ಮಗ - ಇವರನ್ನು ಒಪ್ಪಿಸಿ ಮಗಳನ್ನು ಸಿ.ವಿ. ಪಂಡಿತರಿಗೆ ಧಾರೆ ಎರೆದು ಅಲ್ಲೇ ವೈದ್ಯ ವೃತ್ತಿಗೆ ಅನುವು ಮಾಡಿಕೊಟ್ಟರು. ಕೆಲವೇ ಗ್ರಾಮಗಳಿಗೆ ತಮ್ಮ ವೈದ್ಯತನವನ್ನು ಸೀಮಿತಗೊಳಿಸಿಕೊಂಡರು.

ಹೀಗೆ ಕೈಗೋನ ಹಳ್ಳಿಯಲ್ಲಿ ಎರಡು ವೈದ್ಯ ಮನೆತನಗಳು. ಸಿವಿ. ಪಂಡಿತರ ನಂತರ ವೆಂಕಟರಮಣ ಪಂಡಿತರೂ, ಅವರ ಮಗ ಸುಬ್ಬಾ ಪಂಡಿತರೂ ಖ್ಯಾತರಾದರು. ವೆಂಕಟರಮಣ ಪಂಡಿತರು ಸಿಂಧು ಘಟ್ಟದಲ್ಲಿ ಮನೆ ಕಟ್ಟಿ ಸ್ಥಳ ಬದಲಾಯಿಸಿದರು ; ಅದೂ ಪಕ್ಕದ ಗ್ರಾಮವೇ.

ವೆಂಕಟರಮಣ ಪಂಡಿತರು ಕುದುರೆ ಸವಾರಿ ಮಾಡಿಕೊಂಡು ದೂರದ ಊರುಗಳಿಗೆ ಹೋಗಿ ವೈದ್ಯಸೇವೆ ಮಾಡಿದರು. ಮಗ ಸಿಂಧುಟ್ಟದ ಸುಬ್ಬಾಪಂಡಿತರು ಸ್ಥಳದಲ್ಲೆ ಇದ್ದು ಕೊಂಡು ಜನರಿಗೆ ಸಹಾಯ ಮಾಡುತ್ತಿದ್ದರು.

ಈ ವೇಳೆಗೆ ಕೈಗೋನಹಳ್ಳಿಯಲ್ಲಿ ಜೋಡಿ ದಾರರಾಗಿದ್ದ ಸುಬ್ಬಾ ಪಂಡಿತರು - ಕೈಗೋನಹಳ್ಳಿ ಸುಬ್ಬಾಪಂಡಿತರು - ಸೀಮಿತವಾಗಿ ವೈದ್ಯರಾಗಿ, ತಮ್ಮ ಇತರ ವ್ಯವಹಾರಗಳನ್ನೂ ಶ್ರದ್ಧೆಯಿಂದ ನಡೆಸಿಕೊಂಡು ಹೋಗುತ್ತಿದ್ದರು. ಬಂಧುಗಳಾದ ಸಿಂದು ಘಟ್ಟದವರೂ ಕೈಗೋನಹಳ್ಳಿಯವರೂ ಅನ್ಯೋನ್ಯವಾಗಿ ಇದ್ದರು.

ಕೈಗೋನಹಳ್ಳಿಯ ಸುಬ್ಬಾ ಪಂಡಿತರು, ಆ ಮನೆತನದ ಕೊನೆಯ ವೈದ್ಯರಾದರು. ಅವರ ಹಿರಿಯ ಮಗನೇ ಮಂಡ್ಯದಪ್ರಸಿದ್ಧ ವಕೀಲ ಕೆ. ಲಕ್ಷ್ಮಿನಾರಾಯಣರಾಯರು, ಎರಡನೆ ಮಗ ಶ್ರೀಕಂಠ ಪಂಡಿತರು, ಅಣ್ಣನ ಆಫೀಸಿಗೆ

** ಇದು ನಾನು ಗುರುತಿಸಿಕೊಂಡ ಹೆಸರು. ವಂಶದಲ್ಲಿ ಎಲ್ಲರ ಹೆಸರೂ 'ವೆಂಕಟ' ಶಬ್ದದಿಂದ ಮೊದಲಾಗುತ್ತದೆ. 'ಸಿ' ಎಂದರೆ ಚನ್ನರಾಯಪಟ್ಟಣ ; 'ಪಂಡಿತ', ವಂಶದ ಹೆಸರು. ಸಿ.ವಿ. ಪಂಡಿತರು ಎಂದರೆ ಸತ್ಯಕ್ಕೆ ಅಪಚಾರ ಆಗಿಲ್ಲ ಎಂದು ನನ್ನ ಭಾವನೆ

ಸಹಕಾರಿಯಾಗಿ, ಹಳ್ಳಿಯ ವ್ಯವಹಾರಗಳನ್ನು ಮಂಡ್ಯದಿಂದಲೇ ಹೋಗಿಬಂದು ನೋಡಿಕೊಳ್ಳುತ್ತಿದ್ದರು. ಸುಬ್ಬಾ ಪಂಡಿತರು, ಹಿರಿಯ ಮಗಳು ಸುಬ್ಬಕ್ಕನನ್ನು ಮೈಸೂರಿನ ಖ್ಯಾತ ವಿದ್ವಾಂಸ ಗಂಜಾ ತಿಮ್ಮಣ್ಣಯ್ಯನವರಿಗೆ ಧಾರೆ ಎರೆದರು. ಅವರ ಮಗನೇ ಖ್ಯಾತ ನಿಘಂಟುತಜ್ಞ ನಾಡೋಜ ಜಿ. ವೆಂಕಟಸುಬ್ಬಯ್ಯ.

ಇತ್ತ ಸಿಂಧು ಘಟ್ಟದ ಪಂಡಿತರ ಮನೆ, ವೈದ್ಯವೃತ್ತಿಗೆ ಪ್ರಖ್ಯಾತವಾಯಿತು. ಕೈಗೋನ ಹಳ್ಳಿಯಲ್ಲಿ ಹಿರಿಯರಿಂದ ಬಂದ ವಿಪುಲವಾದ ಜಮೀನು ಇತ್ತು. ವೆಂಕಟರಮಣ ಪಂಡಿತರ ಪತ್ನಿ ನಾಗಮ್ಮ ಅಕ್ಕಿ ಹೆಬ್ಬಾಳಿನ ಹೆಣ್ಣುಮಗಳು. ಸುಬ್ಬಾ ಪಂಡಿತರ ಪತ್ನಿ ಸಾವಿತ್ರಮ್ಮ ಮೈಸೂರಿನ ಹೆಣ್ಣುಮಗಳು. ನಾಗಮ್ಮ, ಖ್ಯಾತ ಸೀನಿಯರ್ ಸರ್ಜನ್ ಸುಬ್ಬರಾಯರ ಸೋದರ ಸಂಬಂಧಿ. ಮೈಸೂರಿನ ಅನಂತ ಸುಬ್ಬರಾಯರ ಸೋದರ ಸಂಬಂಧಿ ಸಾವಿತ್ರಮ್ಮ, ಅನಂತ ಸುಬ್ಬರಾಯರು ಪ್ರೈಮರಿ ಶಾಲಾ ಮಾಸ್ತರರಾಗಿ ಮಕ್ಕಳಿಗೆ ಉಪಯುಕ್ತ ಪುಸ್ತಕಗಳನ್ನು ರಚಿಸಿ ಖ್ಯಾತರಾದವರು.

ತಂದೆ ಮಕ್ಕಳಿಬ್ಬರೂ ಅಣ್ಣತಮ್ಮಂದಿರಂತೆ ಬಾಳಿದರು. ಅತ್ತೆಸೊಸೆಯರು ಅಡಿಗೆ ಮಾಡಿ ನಂತರ ಮನೆಯ ಹಿಂಭಾಗದಲ್ಲಿ ಔಷಧಿಗಳ ತಯಾರಿಕೆಗೆ ಸಹಾಯವಾಗಿದ್ದರು. ಅದು ಒಂದು ದೊಡ್ಡ ನಡುಮನೆ. ಕಲ್ಲುಪತ್ತು, ದೊಡ್ಡ ಒಲೆ, ಒರಳು, ಕಬ್ಬಿಣದ ಕಡಾಯಿಗಳು ಮತ್ತು ಔಷಧಗಳ ತಯಾರಿಕೆಗೆ ಬೇಕಾದ ಪದಾರ್ಥಗಳು ಎಲ್ಲಾ ಅಲ್ಲಿ ವ್ಯವಸ್ಥಿತವಾಗಿದ್ದವು. ಚೂರ್ಣ, ಲೇಹ, ಕಷಾಯ ಎಲ್ಲಾ ಇಬ್ಬರು ಪಂಡಿತರ ಮಾರ್ಗದರ್ಶನದಲ್ಲಿ ಸಿದ್ಧವಾಗುತ್ತಿದ್ದವು. ಧನ್ವಂತರಿಯ ಕರುಣಾಕಟಾಕ್ಷ ಅಪಾರವಾಗಿತ್ತು.

★ ★ ★

ಸಿಂಧುಘಟ್ಟದ ಸುಬ್ಬಾ ಪಂಡಿತರಿಗೆ ಇಬ್ಬರು ಮಕ್ಕಳು. ಮಗ ವೆಂಕಟಸುಬ್ಬಯ್ಯ, ನವೆಂಬರ್ 13, 1887ರಲ್ಲಿ ಜನಿಸಿದರು. ಏಳು ವರ್ಷಗಳ ನಂತರ ಲಕ್ಷ್ಮೀದೇವಿಯ ಜನನ ಆಯಿತು.

ವೆಂಕಟಸುಬ್ಬಯ್ಯನ ಬಾಲ್ಯ, ವಿದ್ಯಾಭ್ಯಾಸ ಸಿಂದು ಘಟ್ಟದ ಶಾಲೆಯಲ್ಲಿ ಆಯಿತು. ಶಾಲೆಯ ಪಾಠಗಳಲ್ಲದೆ ಮನೆಯಲ್ಲಿ ವೈದ್ಯ ಗ್ರಂಥಗಳ ಶ್ಲೋಕಗಳ ಕಂಠಪಾಠ, ಸಂಸ್ಕೃತ ಶ್ಲೋಕಗಳ ಕಂಠಪಾಠ ಆಗುತ್ತಿತ್ತು. ಸಂಸ್ಕೃತ ಮತ್ತು ಉರ್ದು ಕಲಿಯಲು ವ್ಯವಸ್ಥೆಯಿತ್ತು. ವೈದ್ಯ ಶಾಸ್ತ್ರಕ್ಕೆ ಸಂಸ್ಕೃತದ ಜ್ಞಾನ ಪೂರಕವೇ ಸರಿ. ಉರ್ದು ಕಲಿಕೆ ಯುನಾನಿ ತಿಳುವಳಿಕೆ ಬರಲಿ ಎಂದು.

ಸುಬ್ಬಾ ಪಂಡಿತರು ಮಗನನ್ನು ಆಗಾಗ ಹತ್ತಿರದಲ್ಲಿ ರಾಯನ ದುರ್ಗಕ್ಕೆ ಕರೆದು ಕೊಂಡು ಹೋಗಿ ಅಮೂಲ್ಯವಾದ ಸಸ್ಯ ಸಂಪತ್ತಿನ ಪರಿಚಯ ಮಾಡಿಕೊಡುತ್ತಿದ್ದರು. ಔಷಧಕ್ಕೆ ಬೇಕಾದ ಗಿಡಮೂಲಿಕೆಗಳನ್ನು ಪರಿಚಯಿಸುತ್ತಿದ್ದರು. ಬಾಲಕನು ಅವುಗಳನ್ನೆಲ್ಲಾ ಗುರುತಿಸಿ ಪಟ್ಟಿಮಾಡಿಕೊಳ್ಳಬೇಕಾಗಿದ್ದಿತು.

ರಜದ ದಿನಗಳಲ್ಲಿ ತಾಯಿ ಮತ್ತು ಅಜ್ಜಿಯರಿಗೆ ಔಷಧಿಗಳ ತಯಾರಿಕೆಯಲ್ಲಿ ನೆರವಾಗುತ್ತಿದ್ದನು. ಕುಟ್ಟುವುದು, ಅರೆಯುವುದು ; ಲೇಹ್ಯದ ಪಾಕ ಮಾಡವುದು ; ಶ್ರಾವೆಗಳಲ್ಲಿ ರಾಸಾಯನಿಕಗಳನ್ನು ಇಟ್ಟು ಭೂಮಿಯಲ್ಲಿ ಹೂತು ಪುಟ ಇಕ್ಕುವುದು ; ಇವೆಲ್ಲಾ ವೈದ್ಯಕೀಯ ಪರಿಕರ್ಮಗಳು. ಬಾಲಕ ವೆಂಕಟಸುಬ್ಬಯ್ಯನಿಗೆ ಈ ಪ್ರಾಯೋಗಿಕ ವಿಧಾನಗಳು ಬಾಲ್ಯದಲ್ಲೆ ಕರಗತವಾದವು.

ಜನರು ವೆಂಕಟಸುಬ್ಬಯ್ಯನನ್ನು , ಮರಿಪಂಡಿತ ಎಂದು ಕರೆಯುತ್ತಿದ್ದರೂ. ಬಾಲಕನಿಗೆ ಒಂಭತ್ತು ವರ್ಷ ತುಂಬುತ್ತಲು ಉಪನಯನ ಮಾಡಿದರು.

ಈ ವೇಳೆಗೆ, ವೆಂಕಟರಮಣ ಪಂಡಿತರು ನಿಧನರಾದರು. ಸುಬ್ಬಾ ಪಂಡಿತರು ವೃತ್ತಿಯಲ್ಲಿ ಏಕಾಂಗಿ ಆದರು. ದೂರದ ಊರುಗಳಿಂದ ಗಾಡಿಯಲ್ಲಿ ಜನ ಇವರ ಬಳಿಗೆ ಬರುತ್ತಿದ್ದರು. ಕುದುರೆ ಪಂಡಿತರು ಇತ್ತಿಲ್ಲವಲ್ಲ ಈಗ !

ಅತ್ತಿಗುಪ್ಪೆಯಲ್ಲಿ ಪ್ರಸಿದ್ಧ ವಕೀಲ ರಾಮಣ್ಣನವರ ಮನೆ ಖಾಲಿ ಇತ್ತು. ಅವರು ಸುಬ್ಬಾ ಪಂಡಿತರಿಗೆ ಬಹಳ ಕೇವಲವಾಗಿದ್ದರು. ಮನೆಯನ್ನು ಪಂಡಿತರ ವಶಕ್ಕೆ ಕೊಟ್ಟು ಮುಂದೆ ಪಂಡಿತರಿಗೆ ಬಳುವಳಿಯಾಗಿ ಕೊಟ್ಟರು ರಾಮಣ್ಣನವರು. ಇದೇ ಮನೆಯಲ್ಲಿ ನಾವು ಎಲ್ಲಾ ಬೆಳೆದು ಈಗ ನಮ್ಮ ತಮ್ಮ ದಿ. ಕೃಷ್ಣಸ್ವಾಮಿಯ ಕುಟುಂಬ ವಾಸಿಸುತ್ತಾರೆ. ಪಂಡಿತರ ಮನೆಯ ದೀಪ ಪ್ರಜ್ವಲವಾಗಿ ಇದೆ ಇಲ್ಲಿ.

ಅಜ್ಜಿ ನಾಗಮ್ಮನ ಪೋಷಣೆಯಲ್ಲಿ ವೆಂಕಟಸುಬ್ಬಯ್ಯ ಅತ್ತಿಗುಪ್ಪೆಯ ಎ.ವಿ. ಶಾಲೆಯ ವಿದ್ಯಾರ್ಥಿಯಾದನು. ವಿದ್ಯಾರ್ಥಿ ದೆಸೆಯಲ್ಲೆ ಸುತ್ತಮುತ್ತಿನ ಜನಕ್ಕೆ ಹಾಗೂ ಅಧ್ಯಾಪಕ ವರ್ಗಕ್ಕೆ ಪುಟ್ಟವೈದ್ಯನಾಗಿ ಇದ್ದನು.

ವೆಂಕಟಸುಬ್ಬಯ್ಯ ಹದಿನಾರು ವರ್ಷದವನಿದ್ದಾಗ ಶ್ರೀರಂಗಪಟ್ಟಣದ ನಂಜುಂಡಯ್ಯನವರ ಮಗಳು ಹತ್ತು ವರ್ಷದ ಪಾರ್ವತಿಯನ್ನು ಕೊಟ್ಟು 1903ರಲ್ಲಿ ಲಗ್ನವಾಯಿತು. ಎ.ವಿ. ಶಾಲೆಯಲ್ಲಿ ಉತ್ತಮ ದರ್ಜೆಯಲ್ಲಿ ಉತ್ತೀರ್ಣನಾದ ತರುಣ, ತಂದೆಯ ವೈದ್ಯ ವೃತ್ತಿಯಲ್ಲಿ ಸಹಾಯಕನಾದ. ನಾಡಿಜ್ಞಾನ, ರೋಗ ನಿದಾನ, ಔಷಧಗಳ ವಿತರಣೆ ಈ ವೈದ್ಯ ಭಾಗಗಳಲ್ಲಿ ತರಬೇತಿ ಹೊಂದಿದನು.



ಪಾರ್ವತಮ್ಮ - ವೆಂಕಟಸುಬ್ಬಯ್ಯ ದಂಪತಿಗಳು



ಪಾರ್ವತಮ್ಮ - ವೆಂಕಟಸುಬ್ಬಯ್ಯ ದಂಪತಿಗಳು ಕುಟುಂಬದವರೊಂದಿಗೆ

ಮನೆಯಲ್ಲಿ ನಡೆಯುತ್ತಿದ್ದ ಔಷಧಿಗಳ ತಯಾರಿಕೆಯಲ್ಲಿ ಮುಖ್ಯಪಾತ್ರ ವಹಿಸುತ್ತಿದ್ದನು.

ಲಕ್ಷ್ಮೀದೇವಿಯನ್ನು ಮೈಸೂರಿನಲ್ಲಿ ಗುಮಾಸ್ತರಾಗಿದ್ದ ವೆಂಕಟೇಶಯ್ಯನವರಿಗೆ ಧಾರೆ ಎರೆದು ಕೊಟ್ಟರು. ಇವರ ತಂದೆ ದಿವಂಗತ ಮಾದಾಪುರದ ಸೂರ್ಯನಾರಾಯಣಪ್ಪನವರು. ಅರಮನೆಯಲ್ಲಿ ಗುಮಾಸ್ತರಾಗಿದ್ದವರು. ವೆಂಕಟೇಶಯ್ಯನವರಿಗೆ ಅದೇ ಕೆಲಸ ಕೊಟ್ಟಿದ್ದರು ; ಸಂಬಳ ಕಡಿಮೆ ಆದರೆ, ಅವರು ತುಂಬಾ ಜಾಣರು. ಸ್ವಸ್ಥಳವಾದ ಅತ್ತಿಗುಪ್ಪೆಯ ತಾಲ್ಲೂಕು ಕಿಕ್ಕೇರಿ ಹೋಬಳಿಗೆ ಸೇರಿದ ಮಾದಾಪುರದಲ್ಲಿ ಸ್ವಂತ ಮನೆ ಇತ್ತು. ಹತ್ತಿರದ ಗೋವಿಂದನ ಹಳ್ಳಿಯ ಶ್ಯಾನುಭೋಗ ತನವಿತ್ತು. ಜಾಣತನದಿಂದ ಎರಡನ್ನೂ ವಶಪಡಿಸಿಕೊಂಡು ಮೈಸೂರಿನಿಂದ ಮಾದಾಪುರ ಸೇರಿದರು. ಮನೆಯಲ್ಲಿ ಅಣ್ಣ ನಾರಣಪ್ಪ ಮತ್ತು ಅತ್ತಿಗೆ ಸಾವಿತ್ರಮ್ಮ, ತಾಯಿ ಜಾನಕಮ್ಮ. ಮಡದಿ ಲಕ್ಷ್ಮೀದೇವಿಯನ್ನು ಕರೆಸಿಕೊಳ್ಳಬೇಕಾಗಿತ್ತು. ಆಕೆ ಹತ್ತು ಹನ್ನೊಂದು ವರ್ಷದ ಮಗ್ಧ ಬಾಲೆ ಇನ್ನು!

★ ★ ★

1908ರಲ್ಲಿ ಮೈಸೂರಿನಲ್ಲಿ ಆಯುರ್ವೇದಿಕ್ ಕಾಲೇಜು ಆರಂಭ ಆಯಿತು. ಮೈಸೂರಿನಲ್ಲಿದ್ದ ಹಿತೈಷಿಗಳೂ, ಬೀಗರು ನಂಜುಂಡಯ್ಯನವರೂ (ಶ್ಯಾಮು) ವೆಂಕಟಸುಬ್ಬಯ್ಯನನ್ನು ಹೊಸ ಕಾಲೇಜಿಗೆ ಸೇರುವಂತೆ ಸುಬ್ಬಾ ಪಂಡಿತರಿಗೆ ಸಲಹೆ ಕೊಟ್ಟರು. ಅದು ಸೂಕ್ತ ಎನಿಸಿ ಹಾಗೆಯೇ ಕಾಲೇಜಿಗೆ ಮಗನನ್ನು ಸೇರಿಸಿದರು. ಮೊದಲ ವರ್ಷದಲ್ಲಿ ಕಾಲೇಜಿನ ವಿದ್ಯಾರ್ಥಿಗಳ ಸಂಖ್ಯೆ ಹತ್ತು. ತರಗತಿಯಲ್ಲಿ ಬಿ.ವಿ. ಪಂಡಿತರೂ, ಎಸ್.ಎನ್. ಪಂಡಿತರೂ ಅವರ ಸಹಪಾಠಿಗಳು. ಕಾಲೇಜಿನಲ್ಲಿ ನುರಿತ ಅಧ್ಯಾಪಕರ ಕೊರತೆ ಇತ್ತು. ಇಬ್ಬರು ಸಂಸ್ಕೃತ ವಿದ್ವಾಂಸರನ್ನು ಅಧ್ಯಾಪಕರನ್ನಾಗಿ ನೇಮಿಸಿಕೊಂಡಿದ್ದರು. ಇವರು ಸಂಸ್ಕೃತದಲ್ಲಿ ಇದ್ದ ವೈದ್ಯ ಗ್ರಂಥಗಳ ಶ್ಲೋಕಗಳನ್ನು ಪಠಿಸಿ ಅರ್ಥ ಹೇಳುತ್ತಿದ್ದರು ಹಾಗೂ ತಾತ್ಪರ್ಯ ಹೇಳುತ್ತಿದ್ದರು.

ಉಪನ್ಯಾಸಕರ ವ್ಯಾಖ್ಯಾನವು ತರುಣ ವಿದ್ಯಾರ್ಥಿ ವೆಂಕಟಸುಬ್ಬಯ್ಯನಿಗೆ ಸರಿಕಾಣುತ್ತಿರಲಿಲ್ಲ. ತತ್ಸಂಬಂಧದ ಇತರ ಶ್ಲೋಕಗಳನ್ನು ಹೇಳಿ ನಿಜಾಂಶ ತಿಳಿಸುತ್ತಿದ್ದನು.

ಮೂಲಿಕಾ ಶಾಸ್ತ್ರದ ತರಗತಿಯಲ್ಲಿ ಹೀಗೆಯೇ ಶ್ಲೋಕದ ಅರ್ಥ ಮತ್ತು ತಾತ್ಪರ್ಯ ನಡೆದಿತ್ತು. ವಾಸ್ತವವಾಗಿ ವಿದ್ವಾಂಸರು ಮೂಲಿಕೆಗಳನ್ನು ನೋಡಿಯೇ

ಇರುತ್ತಿರಲಿಲ್ಲ! ಈ ವಿದ್ಯಾರ್ಥಿ, ಚಾಮುಂಡಿ ಬೆಟ್ಟದಲ್ಲಿ ಹುಡುಕಿ ತಂದು, ಮಾರನೆಯ ದಿನವೆ ತರಗತಿಯಲ್ಲಿ ಅದನ್ನು ಪ್ರದರ್ಶಿಸುತ್ತಿದ್ದನು. ಒಮ್ಮೊಮ್ಮೆ ತರಗತಿಯಲ್ಲಿ ಹೇಳಿದ್ದು ಸರಿಯಲ್ಲ ಎಂದು ಅಧ್ಯಾಪಕರಿಗೂ ಅರಿವಾಗುತ್ತಿತ್ತು. ತರುಣನ ತಿಳುವಳಿಕೆಯನ್ನು ಮೆಚ್ಚುತ್ತಿದ್ದರು. ತರಗತಿಯಲ್ಲಿ ಇವನ ಹಾಜರಾತಿಯಲ್ಲಿ ಉಪನ್ಯಾಸ ಮಾಡಲು ಹಿಂಜರಿಕೆ ಆಗುತ್ತಿತ್ತು ಅವರಿಗೆ.

ಈ ವಿಷಯ ಪ್ರಾಂಶುಪಾಲರ ಗಮನಕ್ಕೆ ಬಂದಿತು. ವಿದ್ಯಾರ್ಥಿಯನ್ನು ಕರೆಸಿ ಕೊಂಡು ನಾನಾ ಬಗೆಯಲ್ಲಿ ಪರೀಕ್ಷಿಸಿದರು. ಅವನ ಅಪಾರ ಜ್ಞಾನವು ಅವರಿಗೆ ಆಶ್ಚರ್ಯ ಮೂಡಿಸಿತು.

''ಮಗೂ, ನೀನು ಶಾಸ್ತ್ರದ ಪೂರ್ಣ ತಿಳಿವಳಿಕೆ ಹೊಂದಿರುವೆ. ಇನ್ನೂ ಮೂರು ವರ್ಷ ಇಲ್ಲಿ ಓದುವುದು, ನಿನ್ನ ಕಾಲ ವ್ಯರ್ಥವಾಗುತ್ತದೆ. ನೀನು ಆಯುರ್ವೇದ ವಿದ್ವಾಂಸನೆಂದು, ಕಾಲೇಜಿನ ಮುದ್ರೆ ಹಾಕಿ ಅರ್ಹತಾ ಪತ್ರವನ್ನು ಕೊಡುತ್ತೇನೆ. ಹಲವಾರು ಕಡೆ ವೈದ್ಯರ ಅವಶ್ಯಕತೆ ಇದೆ. ಕೆಲಸಕ್ಕೆ ಸೇರಿ ಜನರ ಸೇವೆ ಮಾಡು. ನಿನಗೆ ಒಳ್ಳೆಯದಾಗಲಿ'' ಎಂದು ಆಶೀರ್ವದಿಸಿ, ಹೇಳಿದಂತೆ ಅರ್ಹತಾ ಪತ್ರ ಕೊಟ್ಟರು. ಉಪನ್ಯಾಸಕರ ಮುಜುಗರ ತಪ್ಪಿತು!

ಈ ಅರ್ಹತಾ ಪತ್ರವನ್ನು ಕಟ್ಟು ಹಾಕಿಸಿ ತಾವು ಸೇವೆ ಸಲ್ಲಿಸಿದ ವೈದ್ಯ ಶಾಲೆಯಲ್ಲಿ ಧನ್ವಂತರಿ ಪಟದ ಪಕ್ಕದಲ್ಲಿ ತೂಗು ಹಾಕುತ್ತಿದ್ದರು.

ನಂಜನಗೂಡು, ನನ್ನ ಮಡದಿಯ ತವರು ಮನೆ. ಅವರ ಮನೆಯ ಸಮೀಪದಲ್ಲಿ ಬಿ.ವಿ. ಪಂಡಿತರ ಮನೆ. ಎರಡೂ ಮನೆಗೂ ನಿಕಟ ಸ್ನೇಹ ಇತ್ತು. ಮನೆಯ ಶುಭ, ಸಮಾರಂಭಗಳಲ್ಲಿ ಬಿ.ವಿ. ಪಂಡಿತರು ಬಂದು ಆಶೀರ್ವದಿಸುತ್ತಿದ್ದರು. ''ನಿಮ್ಮಪ್ಪ ಹೇಗಿದ್ದಾನೆ ? ತುಂಬ ಗಟ್ಟಿಗನಯ್ಯ ಅವನು'' ಎಂದು ಒಮ್ಮೆ ಹೇಳಿದರು.

ಇತ್ತ ಮಗ ಕಾಲೇಜಿನಿಂದ ಹೊರಬಿದ್ದ ತರುಣದಲ್ಲಿ ಸುಬ್ಬಾ ಪಂಡಿತರಿಗೆ ಬೆನ್ನು ಫಣಿಯಾಗಿ (ಕ್ಯಾನ್ಸರ್) ಮೈಸೂರು ಕೆ.ಆರ್. ಆಸ್ಪತ್ರೆಯಲ್ಲಿ ನಿಧನರಾದರು. ಸಿಂದುಘಟ್ಟದಲ್ಲಿ ಗೃಹಸ್ಥಾಶ್ರಮ, ವೈದ್ಯವೃತ್ತಿ ಎರಡೂ ಆರಂಭವಾಯಿತು, ವೆಂಕಟಸುಬ್ಬಾ ಪಂಡಿತರಿಗೆ.

ಪಂಡಿತರಿಗೆ ಆರಂಭದಲ್ಲೆ ದೊಡ್ಡ ಸಮಸ್ಯೆ ಎದುರಾಯಿತು. ಮಾದಾಪುರದಿಂದ ಭಾವ ವೆಂಕಟೇಶಯ್ಯ ಮಡದಿಯನ್ನು ಕಳಿಸಿಕೊಡಲು ಒತ್ತಾಯ ಮಾಡಿದರು. ಲಕ್ಷ್ಮೀ

ದೇವಿಯಾದರೊ ತೀವ್ರ ಋತು ಸ್ರಾವದಿಂದ ಬಳಲುತ್ತಿದ್ದಳು. ನಾಗಜ್ಜಿ ಮತ್ತು ಸಾವಿತ್ರಮ್ಮ ತಮಗೆ ತಿಳಿದ ಅನೇಕ ಹಸಿರು ಔಷಧಗಳನ್ನು ಮಾಡಿದರೂ ಫಲ ಕಾಣಲಿಲ್ಲ. ವೆಂಕಟಸುಬ್ಬಯ್ಯನವರೂ ತಿಳಿದ ಔಷಧಿಗಳನ್ನು ಪ್ರಯೋಗಿಸಿದರು. ಫಲಿಸಲಿಲ್ಲ. ತಂಗಿಯನ್ನು ಕರೆದು ಹೇಳಿದರು 'ಅಜ್ಜಾ , ಗ್ರಂಥದಲ್ಲಿ ಇನ್ನೊಂದು ಪರಿಹಾರದ ಸೂಚನೆಯಿದೆ. ಅದನ್ನು ಮಾಡುತ್ತೇನೆ. ಅದೂ ನಿಷ್ಫಲವಾದರೆ ನನಗೆ ವೈದ್ಯ ವೃತ್ತಿಯೇ ಬೇಡ. ಕಾಲೇಜಿನ ಅರ್ಹತಾ ಪತ್ರ ಹರಿದು, ಇರುವ ಜಮೀನು ನೋಡಿಕೊಳ್ಳುತ್ತೇನೆ. ಸಿಕ್ಕಿದರೆ ಯಾವುದಾದರೂ ಶಾಲೆಯ ಮಾಸ್ತರನಾಗುತ್ತೇನೆ. ಇಲ್ಲವೇ ಯಾವುದಾದರೂ ಆಫೀಸಿನಲ್ಲಿ ಗುಮಾಸ್ತನಾಗುತ್ತೇನೆ.''

ನಾಗಜ್ಜಿ ಕೇಳಿದರು ''ಏನು ಆ ಔಷಧಿ ?''

ಮೊಮ್ಮಗನ ಉತ್ತರ ''ಉತ್ತರಣಿ''

ಅಜ್ಜಿ ಹೇಳಿದರು, ''ಬೇಡ ಮಗು, ಆ ಪ್ರಯೋಗ. ಉತ್ತರಿಣಿ, ಉನ್ಮಾದಕ್ಕೆ ಮೂಲ, ಅದು ಅಪಾಯ.''

''ಅಪಾಯ ಆಗಿದ್ದರೆ ಗ್ರಂಥದಲ್ಲಿ ಏಕೆ ಸೂಚಿಸುತ್ತಿದ್ದರು ? ಒಂದು ಪಕ್ಷ ಅಪಾಯದ ಲಕ್ಷಣ ವ್ಯಕ್ತವಾದರೆ, ವಮನ ಮಾಡಿಸಿದರೆ ಆಯಿತು !''

ಮೂಲಘಟಕ ಉತ್ತರಿಣಿ ಇರುವ ಕಷಾಯ ತಯಾರಾಯಿತು. 'ವೈದ್ಯೋ ನಾರಾಯಣೋ ಹರಿಃ' ಎಂದು ತಂಗಿಗೆ ಕುಡಿಸಿದರು. ವಮನ ಮಾಡಿಸಲು ಲವಣಗಳನ್ನು ಕರಗಿಸಿದ ದ್ರಾವಣ ನಾಗಜ್ಜಿ ಸಿದ್ಧವಾಗಿ ಇಟ್ಟುಕೊಂಡರು. ಅದರ ಅವಶ್ಯಕತೆ ಬರಲಿಲ್ಲ.

ನಾಲ್ಕು ದಿನಗಳಲ್ಲಿ ಲಕ್ಷ್ಮೀದೇವಿ ಗುಣ ಹೊಂದಿದಳು. ಬಲ ಹೀನಳಾಗಿದ್ದ ಅವಳಿಗೆ ರಕ್ತವರ್ಧಕ ಜೀರಕಾದಿ ಲೇಹ್ಯ, ಅಶ್ವಗಂಧಿ ರಸಾಯನ, ಅಶ್ವಗಂಧಿ ತುಪ್ಪ ಮತ್ತು ಹಾಲು ಹಣ್ಣು ಕೊಟ್ಟು ಪೋಷಿಸಿದರು. ಹುಡುಗಿಯ ಮುಖದಲ್ಲಿ ಕಾಂತಿ ಬಂದಿತು. ಶುಭದಿನ ಗೊತ್ತು ಮಾಡಿ ಮಾದಾಪುರಕ್ಕೆ ಸಂದೇಶ ಕಳುಹಿಸಿದರು. ವೆಂಕಟೇಶಯ್ಯ ಭಾವ ಬಂದು ಸಂತೋಷದಿಂದ ಊರಿಗೆ ಕರೆದುಕೊಂಡು ಹೋದರು.

ತಂಗಿಯನ್ನು ಆರೋಗ್ಯವಂತಳನ್ನಾಗಿ ಮಾಡಿದ್ದು ತರುಣ ವೈದ್ಯರಿಗೆ ಭುಜಬಲ ಬಂದಿತ್ತು. ತಾಯಿ, ಅಜ್ಜಿಯರೊಂದಿಗೆ ಮನೆಯಲ್ಲಿ ಅನೇಕ ಆಸವಗಳನ್ನು, ಲೇಹ್ಯಗಳನ್ನು ತಯಾರಿಸಿ ಇಟ್ಟರು. ಆಯುರ್ವೇದ ವಿದ್ವಾನ್ ಎಂದು ಕಾಲೇಜಿನ ಅರ್ಹತಾಪತ್ರದಲ್ಲಿ ನಮೂದಿಸಿದ್ದು ತುಂಬ ಆತ್ಮಸ್ಥೈರ್ಯ ಕೊಟ್ಟಿತು.

ಸರಕಾರಿ ಉದ್ಯೋಗ ಇದ್ದರೆ ತಿಂಗಳ ಸಂಬಳ ಬರುತ್ತದೆ. ಮೇಲೆ ಸಂಪಾದನೆಯೂ ಇರುತ್ತದೆ ಎನ್ನುವ ಭಾವನೆ ಬಂದಿತು. ಶ್ರೀರಂಗ ಪಟ್ಟಣದಲ್ಲಿ ಇದ್ದ ಮಾವನವರೂ ಇದನ್ನು ಬೆಂಬಲಿಸಿದರು. ಕಿಕ್ಕೇರಿಯಲ್ಲಿ ಸಂಬಳ ಕಡಿಮೆ. ಆದರೆ ಹೆಚ್ಚು ಸಂಬಳ ಕೊಡುವ ಜಾವಗಲ್ಲು ಮತ್ತು ಶ್ರವಣಬೆಳಗೊಳ, ದೂರದ ಊರುಗಳು. ಅಪರಿಚಿತ ಸ್ಥಳಗಳು, ಕಿಕ್ಕೇರಿಯಲ್ಲಿ ತಿಳಿದ ಜನ ಇದ್ದಾರೆ ; ಬಂಧುಗಳು ಇದ್ದಾರೆ. ತಂಗಿಯ ಮನೆ, ಹತ್ತಿರದ ಮಾದಾಪುರ. ಕಿಕ್ಕೇರಿಯ ವೈದ್ಯ ಶಾಲೆಗೆ ಇಚ್ಛೆಯಿಂದ ಪಂಡಿತರು ವೈದ್ಯರಾದರು. ತಿಂಗಳಿಗೆ ಹದಿನೈದು ರೂಪಾಯಿ ಸಂಬಳ !

ವರ್ಷ 1909 : ಕಿಕ್ಕೇರಿಯಲ್ಲಿ ವೈದ್ಯಶಾಲೆಗೆ ಸ್ವಂತ ಕಟ್ಟಡ ಇರಲಿಲ್ಲ. ವಾಸಕ್ಕೆ ಒಂದು ಕೋಣೆಯನ್ನು ಪಡೆದು ಅಲ್ಲಿಂದಲೇ ತಮ್ಮ ಕಾರ್ಯ ನಿರ್ವಹಿಸಿದರು. ಸಿಂದು ಘಟ್ಟದಲ್ಲಿ ಮನೆಯಲ್ಲಿ ತಯಾರಾದ ಚೂರ್ಣ, ಲೇಹ, ಮಾತ್ರೆಗಳನ್ನು ತಂದು ಬಾಟಲಿಗಳಲ್ಲಿ ತುಂಬಿ ಇಟ್ಟುಕೊಂಡರು. ಬಂದವರಿಗೆ ಲೇಹ್ಯದ ರುಚಿ ತೋರಿಸಿದರು ! ಪಂಡಿತರ ವೃತ್ತಿಶೀಲತೆ, ಔಷಧೋಪಚಾರ ಜನರ ಮೆಚ್ಚುಗೆ ಗಳಿಸಿತು. ಜನಾನುರಾಗಿ ವೈದ್ಯರಾದರು.

ಸೆಪ್ಟೆಂಬರ್ 20, 1909ರಂದು ಪಂಡಿತರ ಪ್ರಥಮ ಪುತ್ರನ ಜನನ ಆಯಿತೆಂದು. ನಂಜುಂಡಯ್ಯನವರು ಸಂದೇಶ ಕಳುಹಿಸಿದ್ದರು. ಮಾದಾಪುರಕ್ಕೆ ತಂಗಿ, ಭಾವನಿಗೂ, ಸಿಂದು ಘಟಕ್ಕೆ ತಾಯಿ, ಅಜ್ಜಿಯರಿಗೂ ಸಂತೋಷದ ಸುದ್ದಿ ತಿಳಿಸಿದರು. ಎಲ್ಲರ ಜೊತೆ ಹೋಗಿ ಶುಭದಿನ, ನಾಮಕರಣ ಸಮಾರಂಭದಲ್ಲಿ ಸಂಭ್ರಮಿಸಿ, ಮಗನಿಗೆ 'ವೆಂಕಟರಮಣ' ಎಂದು ತಮ್ಮ ತಾತನ ಹೆಸರು ಇಟ್ಟರು.

ಮೈಸೂರಿಗೆ ಹೋಗಿ ಉಪನ್ಯಾಸಕರಿಗೂ ಸಹಪಾಠಿಗಳಿಗೂ ಸಿಹಿ ಹಂಚಿದರು. ಪ್ರಾಂಶುಪಾಲರನ್ನು ಕಂಡು ಅವರಿಗೆ ಸಿಹಿ ಕೊಟ್ಟು, 'ಉತ್ತರಣಿ' ಪ್ರಯೋಗವನ್ನು ತಿಳಿಸಿದರು. ಮೆಚ್ಚಿದ ಪ್ರಾಂಶುಪಾಲರು, ಶಿಷ್ಯನನ್ನು ಅಭಿನಂದಿಸಿದರು.

ಸಿಂದುಘಟ್ಟದಲ್ಲಿ ತಾಯಿ, ಅಜ್ಜಿ, ಹೆಂಡತಿ ಮತ್ತು ಮಗು. ಪಂಡಿತರು ವಾರಕ್ಕೆಒಂದು ಸರತಿ, ಕಿಕ್ಕೇರಿಯಿಂದ ಹೋಗಿ ಬಂದು ಮಾಡುವುದು, ಸ್ವಲ್ಪ ಶ್ರಮವೇ ಆಗುತ್ತಿತ್ತು. 1911ರಲ್ಲಿ ದ್ವಿತೀಯ ಪುತ್ರ ಶ್ರೀನಿವಾಸನ ಜನನ ಆಯಿತು. ಮಗುವಿಗೆ ಸೀಳು ತುಟಿ ಇತ್ತು. ಮಗುವಿಗೆ ಮೂರು ತಿಂಗಳು ಆಗುತ್ತಲು ಸೀನಿಯರ್ ಸರ್ಜನ್ ಸುಬ್ಬರಾಯರು ಯಶಸ್ವಿಯಾಗಿ ಹೊಲಿಗೆ ಹಾಕಿ ಕೂಡಿಸಿದರು. ಈಗ ಪಂಡಿತರು

ಸಿಂದುಘಟ್ಟದ ಮನೆ ಖಾಲಿ ಮಾಡಿ, ಕಿಕ್ಕೇರಿಯಲ್ಲಿ ಸಂಸಾರ ಹೂಡಿದರು. ಈ ವೇಳೆಯಲ್ಲಿ ತಾಯಿ ಸಾವಿತ್ರಮ್ಮ ನಿಧನರಾದರು. 1914ರಲ್ಲಿ ಗಂಗ ಹುಟ್ಟಿದಳು.

ಬಿಡುವಿಲ್ಲದ ವೈದ್ಯವೃತ್ತಿ ಪಂಡಿತರು ತಯಾರಿಸುವ ಲೇಹ, ಚೂರ್ಣ, ಕಷಾಯ ಮತ್ತು ಮಾತ್ರೆಗಳು ಕಿಕ್ಕೇರಿಯ ಜನತೆಗೆ ಹಿಡಿಸಿತು. ಸಂಪಾದನೆ ಹೆಚ್ಚೇನೂ ಇರಲಿಲ್ಲ. ಜನಾನುರಾಗಿ ವೈದ್ಯರಾಗಿ ಇದ್ದರು. ಪಂಡಿತರ ಗ್ರಾಹಕ ವರ್ಗ ಅಧಿಕವಾಗಿತ್ತು. ಎಲ್ಲರೂ ಶ್ರೀಮಂತರೇನಲ್ಲ. ಔಷಧದ ಖರ್ಚಿಗೇನೂ ತೊಂದರೆ ಆಗುತ್ತಿರಲಿಲ್ಲ. ಜೀವನ ನಿರ್ವಹಣೆಯೂ ಕಷ್ಟವಾಗಿ ಇತ್ತಿಲ್ಲ.

ಹೊಲದಿಂದ ರಾಗಿ, ಹುರುಳಿ, ಹುಸೆಹಣ್ಣು ಸಾಕಷ್ಟು ದೊರೆಯುತ್ತಿತ್ತು. ಅಕ್ಕಿ ಹೆಬ್ಬಾಳು ಗದ್ದೆಯಿಂದ ಭತ್ತ ಬರುತ್ತಿತ್ತು. ತಿಂಗಳಿಗೆ ಹದಿನೈದು ರೂಪಾಯಿ ಸಂಬಳ ಸಿಗುತ್ತಿತ್ತು.

ಏರಿಳಿಯದ ಸಂಸಾರ ಚಕ್ರ ಉರುಳುತ್ತಿತ್ತು. 1916ರಲ್ಲಿ ಸುಬ್ಬಮ್ಮನೂ 1919ರಲ್ಲಿ ಸೂರ್ಯನಾರಾಯಣನೂ ಜನಿಸಿದರು. ನಾಗಜ್ಜಿ ನಿಧನರಾದರು. ಮೂವರು ಗಂಡು ಮಕ್ಕಳು - ಇಬ್ಬರು ಹೆಣ್ಣು ಮಕ್ಕಳು. ದೊಡ್ಡವನು ವೆಂಕಟರಮಣ ತುಂಬಾ ತುಂಟ! ಶ್ರೀನಿವಾಸ ಯಾವಾಗಲೂ ಅಣ್ಣನ ಹಿಂದೆ ಇರುತ್ತಿದ್ದ. 'ಬಸವನ ಹಿಂದೆ ಬಾಲ' ಎಂದು ಹಾಸ್ಯ ಮಾಡುತ್ತಿದ್ದರಂತೆ.

1919ರಲ್ಲಿ ದೇಶಾದ್ಯಂತ ಇನ್‌ಫ್ಲೋಯಂಜಾ ಜ್ವರ ಸಾಂಕ್ರಾಮಿಕವಾಗಿ ಹರಡಿತು. ಕಿಕ್ಕೇರಿಯಲ್ಲಿ ಜ್ವರ ಪೀಡಿತರಾದ ಮನೆಗಳೇ ಊರಿನ ತುಂಬ. ಈ ಸಮಯದಲ್ಲಿ ನಮ್ಮ ತಂದೆ ವೆಂಕಟಸುಬ್ಬಾ ಪಂಡಿತರು ಮಾಡಿದ ಸೇವೆ ಸುತ್ತ್ಯರ್ಹವಾಗಿ ಜನ ಜನಿತವಾಯಿತು.

ಬೆಳಿಗಿನ ಜಾವಕ್ಕೆ ಎದ್ದು ದೊಡ್ಡ ಕಡಾಯಿಗಳಲ್ಲಿ ನಮ್ಮ ತಾಯಿಯ ನೆರವಿನಿಂದ ನಮ್ಮ ತಂದೆ ಕಷಾಯ ತಯಾರಿಸುತ್ತಿದ್ದರು. ವಿಶೇಷವಾಗಿ ಮೂಲಿಕೆಗಳನ್ನು ಇದಕ್ಕಾಗಿ ಉಪಯೋಗಿಸುತ್ತಿದ್ದರು. ಊರಿನ ಪ್ರಮುಖರೂ ಹಿರಿಯ ಶ್ಯಾನುಭೋಗರೂ ಆದ ಸೀತಾರಾಮಯ್ಯನವರು, ಇಬ್ಬರು ಸಹಾಯಕರೊಂದಿಗೆ ಬೀದಿಯಿಂದಲೇ, 'ಮಗೂ, ರೆಡಿ ಆಗಿದೀಯ ?' ಎಂದು ಕೂಗು ಹಾಕುತ್ತಿದ್ದರು. ಸಹಾಯಕರು ಬಕೆಟ್‌ಗಳಲ್ಲಿ ಕಷಾಯ ವಿತರಿಸಲು ಸೌಟು ಹಿಡಿಯುತ್ತಿದ್ದರು.

ಕುಪ್ಪಿ ಮಾತ್ರೆ, ಚೂರ್ಣ, ಇತರ ಮಾತ್ರೆಗಳನ್ನು ಜೇಬಿನಲ್ಲಿ, ಕೈ ಚೀಲದಲ್ಲಿ ಇಟ್ಟುಕೊಂಡು ಸೀತಾರಾಮಯ್ಯನವರೊಡನೆ ರೋಗಿಗಳ ಮನೆಗೆ ತೆರಳುತ್ತಿದ್ದರು.

ಕುಪ್ಪಿ ಮಾತ್ರೆ ತೇಯ್ದು ಲೇಪನವನ್ನು ವೀಳ್ಯದೆಲೆ ಮೇಲೆ ಇಡುತ್ತಿದ್ದರು. ರೋಗಿಯ ನಾಲಗೆಯ ಮೇಲೆ ಅದು ಲೇಪನವಾಗುತ್ತಿತ್ತು. ಸಹಾಯಕರು ಮೂರು ವೇಳೆಗೆ ಆಗುವಷ್ಟು ಕಷಾಯವನ್ನು ವಿತರಿಸುತ್ತಿದ್ದರು. ಮತ್ತೆ ನಮ್ಮ ತಂದೆ ಸೂಕ್ತವಾದ ಮಾತ್ರೆಗಳನ್ನು ಕಟ್ಟಿಕೊಡುತ್ತಿದ್ದರು. ಜೊತೆಗೆ ಧೈರ್ಯ ತುಂಬುವ ನುಡಿಗಳು. ಇದು ರೋಗದ ಚಿಕಿತ್ಸಾ ಕ್ರಮ.

ಹೀಗೆ ಎಲ್ಲಾರೋಗಿಗಳಿಗೂ ಭೇಟಿ ಕೊಟ್ಟ ಮೇಲೆ ಮನೆಗೆ ಬರಲು ಮಧ್ಯಾಹ್ನ ಆಗುತ್ತಿತ್ತು. ಊಟ ಆದಮೇಲೆ ವಿಶ್ರಮಿಸಿಕೊಂಡು ನಮ್ಮ ತಂದೆ, ಮತ್ತೆ ಎಲ್ಲರ ಮನೆಗೂ ಹೋಗಿ ಧೈರ್ಯ ಹೇಳಿ, ರೋಗಿಯ ಸ್ಥಿತಿ ಗಮನಿಸಿ, ಸಲಹೆ ಹೇಳಿ ಮನೆಗೆ ಬರುತ್ತಿದ್ದರು. ರಾತ್ರಿ ಮತ್ತೆ ಎಲ್ಲರ ಮನೆಗೆ ಭೇಟಿ. ಅಗತ್ಯವಿದ್ದರೆ ಕುಪ್ಪಿ ಮಾತ್ರೆಯಿಂದ ಲೇಪನ.

ಎಲ್ಲ ರೋಗಿಗಳೂ ಜ್ವರದಿಂದ ವಿಮುಕ್ತರಾದರು ಅವರು ಮಾಡಿದ ಸೇವೆಯನ್ನು ಎಲ್ಲ ಜನರೂ ಮುಕ್ತ ಕಂಠದಿಂದ ಹೊಗಳಿದರು. ವೆಂಕಟಸುಬ್ಬಾ ಪಂಡಿತರು ಹೆಸರು ಮತ್ತು ಅವರ ಕುಪ್ಪಿ ಮಾತ್ರೆ ಬಾಯಿಂದ ಬಾಯಿಗೆ ಜನತೆಯಲ್ಲಿ ಮನೆ ಮಾತಾಯಿತು. ಉತ್ಸಾಹಿ ವೈದ್ಯನ ತಲೆಗೆ ಕಿರೀಟ ಇಟ್ಟಂತೆ ಆಗಿತ್ತು!

ಪಂಡಿತರು ಏಳೆಂಟು ಕುಪ್ಪಿ ಮಾತ್ರೆಗಳ ಒಡೆಯರಾಗಿದ್ದರು. ವಂಶ ಪಾರಂಪರ್ಯವಾಗಿ ಬಂದ ವೈದ್ಯ ನಿಧಿ ಅವು . ಹೊಸ ಜ್ವರಕ್ಕೆ ಉಪಯೋಗಿಸಿದ ಕುಪ್ಪಿ ಮಾತ್ರೆ ವಂಶಪಾರಂಪರ್ಯವಾಗಿ ಬಂದುದಲ್ಲ. ಅದರದ್ದೇ ಒಂದು ರೋಚಕ ಸಂಗತಿ!

ಬೆಣ್ಣೆ ಮಾರಲು ಹಳ್ಳಿಯ ಹೆಂಗಸು ಮನೆಗೆ ಬಂದಿದ್ದಳು. ತೂಕ ಮಾಡಲು ಒಂದು ಒಂದು ಪುಟ್ಟ ಕಲ್ಲು ಉಪಯೋಗಿಸುತ್ತಿದ್ದಳು. ಆ ಕಾಲದಲ್ಲಿ ಚಿಕ್ಕದಾದ ಆ ಕರಿಯ ಕಲ್ಲು ತುಂಬ ಸಾಂದ್ರವಾಗಿ ಇತ್ತು. ಪಂಡಿತರು ಅದನ್ನು ಕೈಲಿ ಹಿಡಿದು ತೂಕ ಗಮನಿಸಿದರು. ಆ ಹೆಂಗಸು : 'ಅನುಮಾನ ಪಡ್ಬೇಡಿ, ಅಂಗಡೀಲಿ ತೂಕ ಹಾಕಿ ನೋಡಿ. ಸರಿಯಾಗಿ ಒಂದು ಸೇರು ತೂಗುತ್ತೆ.'

''ತಾಯಿ, ನಿನಗೆ ತೂಕ ಹಾಕಲು ಸರಕಾರ ತೂಕದ ಬಟ್ಟು ಕೊಡ್ತೀನಿ. ಮೇಲೆ ನಿನಗೆ ಹತ್ತು ರೂಪಾಯಿ ಕೊಡ್ತೀನಿ' ಈ ಕಲ್ಲು ನನಗೆ ಬೇಕು. ಇದು ಔಷಧಿಗೆ ಉಪಯೋಗ.''

ಆಕೆಗೆ ಸಂತೋಷವಾಯಿತು. 'ಸರ್ಕಾರಿ ಬಟ್ಟು ಇಟ್ಕೊಂಡ್ರೆ ಅನುಮಾನ ಇರೋದೆ ಇಲ್ಲ, ನನಗೆ ಹತ್ತು ರೂಪಾಯಿ ಬೇಡ. ಔಷದಕ್ಕೆ ಉಪಯೋಗ ಆದ್ರೆ ನಂಗೂ ಪುಣ್ಯ ಬರುತ್ತೆ. ಸರ್ಕಾರಿ ಬಟ್ಟು ಕೊಡಿ'' ಹೀಗೆ ಬಂದ ಆ ಕುಪ್ಪಿ ಮಾತ್ರೆಯು ಜ್ವರ ನಿವಾರಕ ಎಂದು ಕಂಡುಕೊಂಡರು. ಅದನ್ನು ಉಪಯೋಗಿಸಲು ಪ್ರಾವೀಣ್ಯ ಬೇಕಾಗಿತ್ತು. ಒಂದು ಗೀರಾದರೆ ಕಡಿಮೆ, ಎರಡು ಗೀರಾದರೆ ಹೆಚ್ಚು ಅದರ ವಿಚಿತ್ರ ಗುಣ ! ತೇಯ ಬೇಕಾದರೆ ಸಣ್ಣ ವೃತ್ತಗಳಲ್ಲಿ ಲೆಕ್ಕಾಚಾರವಾಗಿ ತೇಯ್ದು ಪ್ರಯೋಗಿಸುತ್ತಿದ್ದರು.

ಬೆಣ್ಮೆಯವಳ ತೂಕದ ಕಲ್ಲು, ಇನ್‌ಫ್ಲೂಯೆಂಜಾ ಜ್ವರವನ್ನು ಕಿಕ್ಕೇರಿಯಿಂದ ಓಡಿಸಿತ್ತು! ಇದರ ಲೇಪನ ಆದ ಸ್ವಲ್ಪ ಕಾಲದಲ್ಲಿಯೇ ಮೈ ಬೆವರಿ ಹೋಗಿ ಜ್ವರ ವಿಮುಕ್ತವಾಗುತ್ತಿದ್ದನು ! ಮತ್ತೆ ಉಳಿದ ಕೆಮ್ಮು, ಮೈ ಕೈ ನೋವಿಗೆ ಕಷಾಯ ಮತ್ತು ಮಾತ್ರೆಗಳು ಕೆಲಸ ಮಾಡುತ್ತಿದ್ದವು.

ನಮ್ಮ ತಂದೆಯಿಂದ ಚಿಕಿತ್ಸೆ ಪಡೆದ ಅನೇಕರು ಅಭಿನಂದನಾ ಬರೆಹಗಳು ಅವರ ವಿಸಿಟರ್ಸ್ ಬುಕ್ ನಲ್ಲಿ ಕಾಣ ಸಿಗುತ್ತವೆ. ಅವುಗಳಲ್ಲಿ ಹಲವು ಬರೆಹಗಳ ಪಾಠವನ್ನು ಕೆಳಗೆ ಕೊಟ್ಟಿದೆ.

★ ★ ★

5 Members of my family including myself were sick of whom my wife and my son were about to die and other were seriously ill. For 20 or 25 days Mr. Venkatasubbiah Native pandit of this place attended to us twice or thrice every day and cured every one. It is strange to say that my wife was cured. The result is that we are all well cured now.

I am highly thankful to him who cured us all and pray God for his long life.

10th November 1918 **G. Naraishmayya**

Kikkeri

ಆನಿಗೊಳದ ** ಖಮ್ರುದಿನ ಸಾಬಿಯಾದ ನಾನುನನಗೂ ಮತ್ತು ನನ್ನ ಮಕ್ಕಳಿಗೂ ಇನ್‌ಫ್ಲೂಯೆನ್‌ಜಾ ಖಾಯಿಲೆಯಿದ್ದಾಗ ಮಾ। ರಾ। ಶ್ರೀ ಕಿಕ್ಕೇರಿ ನೇಟಿವ್ ಪಂಡಿತರಾದ ವೆಂಕಟಸುಬ್ಬಯ್ಯನವರು ಆನಿಗೊಳಕ್ಕೆ ಎರಡು ಸಾರಿ ಬಂದು ಕಷ್ಟವಾಗಿದ್ದ ಸದರಿ ಖಾಯಿಲೆಯನ್ನು ಅವುಷಧಿ ಕೊಟ್ಟು ಗುಣ ಪಡಿಸಿದ್ದಲ್ಲದೆ ನನ್ನ ಮನೆಯಲ್ಲಿ ಯಿತರರಿಗೂ ಖಾಯಿಲೆಯಾದ್ದರಿಂದ ಕಿಕ್ಕೇರಿಗೆ ಕರೆದುಕೊಂಡು ಬಂದು ತಂಮಲ್ಲಿ ಇಲಾಜು ಮಾಡಿಸಿದ್ದರಲ್ಲ(ದೆ) ಕುಪ್ಪಿಮಾತ್ರೆ ಮತ್ತು ಕಷಾಯ ಕೆಂಮಲಿಗೆ ಗುಳಿಗೆ ಯೀ ಅವುಷಧಿಯಲ್ಲಿ ನಾವೆಲ್ಲ ಗುಣ ಹೊಂದಿರುತ್ತೇವೆ. ಈ ಅವುಷಧಿಯಿಂದ ಇತರ ಜನರಿಗೂ, ಉಪಕಾರವಾದೀತೆಂದು ನಾನು ಖಂಡಿತವಾಗಿ ಹೇಳುತ್ತೇನೆ. ನನಗೆ ಮತ್ತು ನನ್ನ ಕುಟುಂಬದವರಿಗೆ ಯಿವರ ಅವುಶಧಿಯಿಂದ ಗುಣವಾದದ್ದಕ್ಕೆ ಇವರಿಗೆ ಬಹಳವಾಗಿ ವಂದಿಸುತ್ತೇನೆ.

(ಉರ್ದುವಿನಲ್ಲಿ ಸಹಿ ಇದೆ) ತಾ. 5-11-1918

** **ಆನಿಗೊಳ ಕಿಕ್ಕೇರಿಗೆ ನಾಲ್ಕು ಮೈಲಿದೂರದಲ್ಲಿ ಚನ್ನರಾಯ ಪಟ್ಟಣದ ರಸ್ತೆಯಲ್ಲಿ ಸಿಗುವ ಸಣ್ಣ ಗ್ರಾಮ.**



ಪಾರ್ವತಮ್ಮ - ವೆಂಕಟಸುಬ್ಬಯ್ಯ ದಂಪತಿಗಳು



ನಾಗರಾಜನ ವಿವಾಹ ಸಂದರ್ಭದಲ್ಲಿ ವೆಂಕಟಸುಬ್ಬಯ್ಯನವರು

ನಮ್ಮ ತಾಯಿಗೆ ಮತ್ತು ನಮ್ಮ ಅಣ್ಣನ ಮಗುವಿಗೆ ಬಂದ ಈಗಿನ ಜ್ವರ ತಲೆನೋವು ಕೆಮ್ಮು ವಗೈರೆ ಕಾಯಿಲೆಯಿಂದ ಪೀಡಿತರಾಗಿ ಇದ್ದರು. ಇದಕ್ಕಾಗಿ ಇಲ್ಲಿನ ನೇಟಿವ್ ಪಂಡಿತ್ ವೆಂಕಟಸುಬ್ಬಯ್ಯನವರಿಂದ ಈ ಲಾಜು ಮಾಡಿಸಿದ್ದರಿಂದ ಬೆಳ್ಳಿಗ್ಗೆ ಸಾಯಂಕಾಲ ಬಂದು ಕಷಾಯ ವಗೈರೆ ಮಾಡಿಕೊಟ್ಟು ಗುಣ ಪಡಿಸಿದ್ದಕ್ಕಾಗಿ ಸದರಿ ಪಂಡಿತರನ್ನು ಎಷ್ಟುವಂದಿಸಿದ್ರು ಸಾಲದು.

ತಾ. 9-10-1918

ವೈದಾನಿ ನಾಗಪ್ಪ ಶೆಟ್ಟಿ

ಕಿಕ್ಕೇರಿ

ಕಿಕ್ಕೇರಿ ಪಟೇಲ ದೇವೇಗೌಡ

ನನಗೆ ಈಗ್ಯೆ ತಿಂಗಳ ಕೆಳಗೆ ಈಗ ಹರಡಿಸುವ ಇನ್‌ಪ್ಲೂಯಂಜ ಎಂಬ ಜ್ವರವು ಪ್ರಾಪ್ತವಾಗಿ ನ್ಯೂಮೊನಿಯಾಕ್ಕೆ ತಿರುಗಿ ಕಷ್ಟವಾಗಿತ್ತು. ಇಲ್ಲಿನ ನೇಟಿವ್ ಪಂಡಿತರು ಮಹಾರಾಜೇ ಶ್ರೀ ವೆಂಕಟಸುಬ್ಬಾ ಪಂಡಿತರನ್ನು ಅಪೇಕ್ಷಿಸಿದ್ದರ ಮೇಲೆ ಸದರಿಯವರು ಪ್ರತಿ ನಿತ್ಯವೂ ಮೂರು ವೇಳೆ ಬಂದು ನೋಡಿಕೊಂಡು ಇವರು ತಯಾರು ಮಾಡಿದ ಕಶಾಯದೊಡನೆ ಕುಪ್ಪಿ ಮಾತ್ರೆಯನ್ನು ಉಪಯೋಗಿಸಿ ಸದರಿ ಕಾಯಿಲೆಯನ್ನು ಹತ್ತು ಹನ್ನೆರಡು ದಿವಸಗಳೊಳಗಾಗಿ ಗುಣ ಪಡಿಸಿದರು ಮತ್ತು ಕೆಂಬಲಿನಲ್ಲಿ ರಕ್ತ ಬೀಳುತ್ತಾ ಇತ್ತು. ಇದರಿಂದ ನನಗೆ ತುಂಬ ಗಾಬರಿಯಾಗಿ ಇತ್ತು. ಇದಕ್ಕೂ ಕೂಡ ಇವರು ತಯಾರು ಮಾಡಿರತಕ್ಕ ಮಾತ್ರೆಯನ್ನು ನಾಕು ದಿವಸ ಉಪಯೋಗಿಸಿದ್ದರಿಂದ ಗುಣವಾಯ್ತು. ಇವರು ಮಾಡಿರತಕ್ಕ ಉಪಕಾರವನ್ನು ಮರೆಯಲಾರೆ.

ನನ್ನ ಮರಣಾವಧಿ ಮರೆಯಲಾರೆ. ದೇವರು ಇವರಿಗೆ ದೀರ್ಘಾಯುಸ್ಸು ಕೊಟ್ಟು ಕಾಪಾಡಬೇಕಾಗಿ ಭಗವಂತನನ್ನು ಪ್ರಾರ್ಥಿಸುತ್ತೇನೆ.

ಕಿಕ್ಕೇರಿ ಪಟೇಲ ದೇವೇಗೌಡ

3-11-18

ಅಗ್ರಹಾರ ಬಾಚಹಳ್ಳಿ ಅ.ಮಾ. ಕೆ. ನರಸಿಂಹಮೂರ್ತಿ

ಕಿಕ್ಕೇರಿ ನೇಟೀವ್ ಪಂಡಿತರಾದ ವೆಂಕಟಸುಬ್ಬಯ್ಯನವರು ನನಗೆ ಪ್ರಾಪ್ತವಾದ ಸಂನಿಪಾತ ಜ್ವರಕ್ಕೆ ಮಾತ್ರೆಗಳಿಂದಲೂ ಮೂಲಿಕೆಗಳಿಂದಲೂ ಔಷಧ ಕೊಟ್ಟು ನನ್ನ ಪ್ರಾಣ (ದಾನ) ವನ್ನು ಉಳಿಸಿದ್ದಕ್ಕೆ ನಾನು ಅವರ ವಿಚಾರವಾಗಿ ಎಷ್ಟುವಂದಿಸಿದರೂ ಸಾಲದು. ಭಗವಂತ ಅವರಿಗೆ ಚೆನ್ನಾಗಿ ಕಾಪಾಡಬೇಕೆಂತಲೂ ಪ್ರಾರ್ಥಿಸುತ್ತೇನೆ. ಇವರು ಇಲ್ಲಿ ಅನೇಕ ಖಾಯಿಲೆ ಬಿದ್ದ ಜನಗಳಿಗೆ ತಕ್ಕ ಇಲಾಜು ಮಾಡಿ ಗುಣಪಡಿಸಿದ್ದಾರೆ. ಇವರ ಔಷಧಿಯಿಂದ ನನಗೆ ಪ್ರಾಣದಾನವನ್ನು ಮಾಡಿದ್ದಕ್ಕಾಗಿ ನಾನು (ಎಂದೂ) ಮರೆಯಲಾರೆ.

ತಾ. 18-10-18

ಕೆ. ನರಸಿಂಹ ಮೂರ್ತಿ

ಅ. ಮಾ.

ಅಗ್ರಹಾರ ಬಾಚಹಳ್ಳಿ ವಿ.ಇ. ಸೆಲ್

ಈ ಸಮಯದಲ್ಲೆ ಮೈಸೂರು ಆಯುರ್ವೇದ ಕಾಲೇಜಿಗೆ ಮೂಲಿಕಾಶಾಸ್ತ್ರದ ಬೋಧ್‌ಕರ ಅವಶ್ಯಕತೆ ಬಿತ್ತು. ಪ್ರಾಂಶುಪಾಲರಿಗೆ ಹೊಳೆದದ್ದು ಪಂಡಿತ್ ವೆಂಕಟಸುಬ್ಬಯ್ಯ ! ಕಾಲೇಜಿನಿಂದ ಪಂಡಿತರಿಗೆ ಕರೆಬಂತು, ಉಪನ್ಯಾಸಕರಾಗಲು. ಸಂಬಳ ನಲವತ್ತು ರೂಪಾಯಿ. ಹೆಮ್ಮೆಯ ಹುದ್ದೆಯಾದರೂ ಪಂಡಿತರಿಗೆ ಮನಸ್ಸು ಹಿಂಜರಿಯಿತು. ಅಷ್ಟೆಹಣವನ್ನು ಅಥವಾ ಅದಕ್ಕಿಂತ ಮಿಗಿಲಾಗಿ ಇಲ್ಲಿ ಸಂಪಾದನೆ ಮಾಡ ಬಲ್ಲವರಾಗಿ ಇದ್ದರು. ನಗರದಲ್ಲಿ ನಲವತ್ತು ರೂಪಾಯಿಗಳಲ್ಲಿ ಈ ದೊಡ್ಡ ಸಂಸಾರ ನಿಭಾಯಿಸಲು ಅಸಾಧ್ಯ ಎನಿಸಿತು. ಮೈಸೂರು ಬಿಟ್ಟು ಮಾದಾಪುರ ಸೇರಿದ ವೆಂಕಟೇಶ ಭಾವನ ಉದಾಹರಣೆ ಮನಸ್ಸಿಗೆ ಬಂದಿತು. ಸೌಜನ್ಯದಿಂದ ನಿರಾಕರಿಸಿದರು.

1919-20ರಲ್ಲಿ ವೆಂಕಟಸುಬ್ಬಯ್ಯನವರಿಗೆ ಮೂವತ್ತು ದಾಟಿದ ತಾರುಣ್ಯ. ಕಿಕ್ಕೇರಿಯಲ್ಲಿ ಮೆರೆದ ವೃತ್ತಿತತ್ಪರತೆ ಅವರ ಉತ್ಸಾಹವನ್ನು ಮೇಲಕ್ಕೆ ಏರಿಸಿತ್ತು. ಶ್ರವಣ ಬೆಳಗೊಳದ ಪರಿಚಯದ ಜೈನ ಸಮುದಾಯ, ದೂಡ್ಡತರ ಹಳ್ಳಿಯ ಸುತ್ತ ಮುತ್ತ ಇದ್ದ ಒಕ್ಕಲಿಗ ಜನಾಂಗ, ಪಂಡಿತರ ಬೆನ್ನೆಲುಬಾಗಿ ಇದ್ದರು. ! ಪಂಡಿತರನ್ನು ಬೆಳಗೊಳದ ವೈದ್ಯ ಶಾಲೆಗೆ ವೈದ್ಯರಾಗಿಸಲು ಅಲ್ಲಿಯ ಜನ ಸಫಲರಾದರು.

ಸಂಬಳ ಐವತ್ತು ರೂಪಾಯಿ ಹೆಚ್ಚಾಗಿತ್ತು! ಔಷಧ ಭತ್ಯೆ ಹತ್ತು ರೂಪಾಯಿ. ವೈದ್ಯ ಶಾಲೇಜಿಗೆ ಸೊಗಸಾದ ಕಟ್ಟಡ ಅದರ ಒಂದುಗಡೆಯೇ ವೈದ್ಯರಿಗೆ ವಾಸಗೃಹ. ಉತ್ಸಾಹ ಹೆಚ್ಚಿರೆಕ್ಕೆ ಬಂದಿತ್ತು. ವೈದ್ಯ ಶಾಲೆಗೆ ಬರುವ ಜನರ ಸಂಖ್ಯೆ ಹೆಚ್ಚಿತ್ತು. ಔಷಧಿಗಳನ್ನು ತಯಾರಿಸಿ ಕೊಳ್ಳಲು ಹೆಚ್ಚು ಹಣ ಬೇಕಾಗಿತ್ತು. ಜೇಬು ಕಟ್ಟುವುದರ ಅನುಭವ ಆಯಿತು ! ಪರಸ್ಥಳಗಳಿಂದ ಬರುತ್ತಿದ್ದ ಜನ, ಅನೇಕರು ವೈದ್ಯ ಶಾಲೆಗೆ ಭೇಟಿ ಕೊಡುತ್ತಿದ್ದರು. ಪಂಡಿತರು ಅವರನ್ನು ಆದರಿಸಿ ಮನೆಯಲ್ಲಿ ಊಟ ಉಪಚಾರ ಮಾಡುತ್ತಿದ್ದರು. ಅನೇಕ ಸಲ ಬೆಳಗೊಳಕ್ಕೆ ಭೇಟಿ ಕೊಡುವ ಅಧಿಕಾರಿಗಳನ್ನೂ ವೈದ್ಯಾಲಯದಲ್ಲಿ ಉಳಿಸಿಕೊಂಡು ಅವರಿಗೆ ಆಥಿತ್ಯ ನೀಡುತ್ತಿದ್ದರು. ನಮ್ಮ ತಾಯಿ ಉತ್ಸಾಹದಿಂದ ವಿಶೇಷವಾಗಿ ಅಡುಗೆ ಮಾಡಿ ಬಡಿಸಿ, ಅತಿಥಿಗಳ ಮೆಚ್ಚುಗೆಗೆ ಪಾತ್ರರಾಗುತ್ತಿದ್ದರು.

ಬಂದವರನೇಕರು ಇವರು ತಯಾರಿಸಿ ಇಟ್ಟ ಲೇಹವನ್ನು ಇಷ್ಟಪಟ್ಟು ಊರಿಗೆ ವಿ.ಪಿ. ಮೂಲಕ ಲೇಹ ತರಿಸಿಕೊಳ್ಳುತ್ತಿದ್ದರು. ಅದರಲ್ಲೂ ಬಾಣಂತಿ ಲೇಹಕ್ಕೆ ತುಂಬ ಜನರ ಅಪೇಕ್ಷೆ.

ಪಂಡಿತರು ಭತ್ಯೆ ಹೆಚ್ಚು ಮಾಡಲು ಸರ್ಕಾರಕ್ಕೆ ಅಹವಾಲುಗಳನ್ನು ಬರೆದರು. ಆದರೆ ಅವರಿಗೆ ಸಿಕ್ಕಿದ ಸುದ್ದಿ 'ಆಸ್ಪತ್ರೆ ಬರಲಿದೆ' !

1924ರಲ್ಲಿ ಶ್ರವಣ ಬೆಳಗೊಳಕ್ಕೆ L.F. ಆಸ್ಪತ್ರೆ ಮಂಜೂರು ಆಯಿತು. ಆಸ್ಪತ್ರೆಯು ಆಯುರ್ವೇದ ವೈದ್ಯಶಾಲೆಯ ಕಟ್ಟಡದಲ್ಲಿ ಕೆಲಸ ಮಾಡಲೆಂದು ಸರ್ಕಾರ ಆದೇಶಿಸಿತು. ಬೆಳಗೊಳದ ವೈದ್ಯ ಶಾಲೆಯನ್ನು ಎರಡು ಮೈಲಿ ದೂರದ ಕಿಕ್ಕೇರಿ ರಸ್ತೆಯ ದೊಡ್ಡ ತರಹಳ್ಳಿಗೆ ವರ್ಗಾಯಿಸಿದರು.

ಹೊಸ ಜಾಗದವರೂ ಪಂಡಿತರಿಗೆ ಬೇಕಾದವರೆ ! ಆದರೆ ವಾಸಿಸಲು ಅನುಕೂಲ ಇರಲಿಲ್ಲ. ಕಿಕ್ಕೇರಿಯಲ್ಲಿ ಸಂಸಾರ ಹೂಡಿ, ದೊಡ್ಡ ತರಹಳ್ಳಿಗೆ ಕಾಲ್ನಡಿಗೆಯಲ್ಲಿ ಹೋಗಿ ಬಂದು ಮಾಡುತ್ತಿದ್ದರು. ಆಸ್ಪತ್ರೆಗಳನ್ನು ಅವಲಂಬಿಸುವ ಹೊಸ ಪೀಳಿಗೆ ; ಆದರೂ ಹಳೆಯ ಜನ ಇವರನ್ನು ಮರೆತಿರಲಿಲ್ಲ. ಈಗ ಪಂಡಿತರು ನೂತನ ಪದ್ಧತಿಯ ಎದುರು ನಿಲ್ಲಬೇಕಾಯಿತು! ಶ್ರವಣಬೆಳಗೊಳಕ್ಕೆ ಭೇಟಿ ಕೊಟ್ಟವರ ಅಭಿಪ್ರಾಯಗಳಲ್ಲಿ ಕೆಲವರ ಪಾಠ ಕೆಳಗೆ ಇದೆ.

This grant in aid hospital is very popular. Mr. Venkatasubbaiah the Pandit in charge is very highly spoken of I have watched him these 3 or 4 days and found him a patient doctor. He has been doing grand work and deserves greater on couragement.

Shravana belagola (Camp)
26 Oct. 1919

M. Venkatarangachar
Dr. Inspector of Edn.
Hassan District

I had the pleasure of paying a visit to this dispendary today. The gentleman incharge of the hospital seems to be kind and efficient. He has kept some stock of medicines. The amount of Rs. 10/- which is allowed towards the cost of medicines is too low judging from the requirements of the town which is a big place with a population of nearly 1500.

29-4-19

M. Nageshwara Iyer
Advocate

The native Pandith in charge of the dispensary seems to be popular and efficient. As this is the only hospital in this place the grant of Rs. 10/- new being given towards the cost of medicines may be increased having regard.to the mumber of patients who are being treated here.

H. Narjundaiah
29-4-19

Mr. Venkatasubbiah seems to be very active in his dispensary. He has on hand very good and effective medicines and is doing very useful work.

30-3-21

H.Sambaya

Sub. Division Officer Mys Railway

Hasasan

I had last been to this place more than 2 years ago, and I see our native native Pandit Mr. Venkatasubbiah working with good deal of enthusiasm, and I had a practical proof of his cleverness.this time as one of our party fell ill on our coming to this place and was treated here with the effect that he got very much better in the course of a few hours. The pandit is spoken of as very popular and deserves further encouragement. He has maintained his hospital in a very good condition.

12-10-21

H. Nanjundaiah
Munsiff
Holenarasipura

Visited the Ayurvedic Vidyashala. The attendance of sick people averaged about 9 per diem. the Vidvan Mr.Venkatasubba Pandit is very earnest to treat the patients that attend sala in addition to what he is pleased to attend to patients in their residence. The prospective establishment of a local fund dispensary has to a certain extent damps his enthusiasm and keeps him in anxiety of his removal to some other new place. But still he attends to dispensary work quite well

16-6-23

B.C. Anantharamaingar

" In my very short experience, my father was suffering from a long disease since ten years. He was completely cured of his disease in course of a fortnight under his treatment."

7-1-1920

K.V. Srikantaiah
Visitor

-Exteacted from Sri K.V. Srikantaiah's record in the visitor's book.

I was very much pleased with the treatment meted out to me by Mr. Venkatasubbiah at Sravanagelagola during my circuit. He seems to be a very able ayurvedic Pandit, and his medicines seem to be very effective and useful. Moreover he is very popular among the people here. Taking into consideration the great interest he takes in his profession and the consequent popularity he commends, I have very little doubt of his ability in the profession. Such a lesson deserves every encouragement both from the public and the Government. The allowance he gets from the muncipility of this place is very little when compared with his ability and work.

23rd April 1921
....Bangalore

(Syed Baharuddin Shekhari)
Guru of Mahammedans
Tumkur Taluk

I have visited the Ayurvedic Dispensary seven times now, and today also. the Pandit mr. Venkata subbayya has been doing very useful work and catering to the need of the people who have firm faith in ayurvedic medicienes. The attendence is fairly good in spite of the presence of the local fund dispensary.

I have also used some mixtures prepared by him for Malaria as also some "lehyams" and have derived conisderable benefit by their use.

He has very successfuly treated my children who were very frequently suffering from Malaria.

His treatment of the patients and his good manners are both attractive.

I wish him very success in his profession.

B. Ramaswamayya

Amildar

14-3-41

Pandith Venkatasubhya the Ayurvedic Physician of this place was kind enough to treat me yesterday and today for headache etc and one dose of medicine he gave me produced considerable relief. He enjoys a high reputation in the town and its neighbourhood and I think very deservedly too. It is high time that the ayurvedic system of treatment was visited to more and more by the people and pandits like Mr. Venkatasubhiah who enjoy both popularity and confidence of people ought to receive greater encouragement at the hands of both people and Govt. I wish Mr. Venkaasubbiya the best of all wishes.

Kikkeri K. Krishna Rao

25-1-28 DEO.

ಪಂಡಿತರ ಟಿಪ್ಪಣಿಯಿಂದ

ಪ್ರೋಮ ಷರಬತ್ತು

ವಾದಕ್ಕೆ ಅಳತೆ ಶೇರು 1. ಶುಂಟಿ ತೊಲ 2. ಭಜಿ ತೊಲ 1 ಯಿವುಗಳನ್ನು ಜಜ್ಜಿ 6 ಸೇರು ನೀರು ಸೇರಿಸಿ 26 ಗಂಟೆ ಕಾಲ ನೆಲುಪಿನ ಮೇಲಿಟ್ಟು ನಂತರ ಸಣ್ಣ ವುರಿಯಲ್ಲಿಟ್ಟು। ಸೇರು ನೀರು ಉಳಿಯುವಂತೆ ಕಷಾಯಿ ಮಾಡಿ ಸರಿಗೆ 2 n ($3\frac{1}{2}$?) ಶೇರು ಸಕ್ಕರೆ ಹಾಕಿ ವಲೇ ಮೇಲಿಟ್ಟು ನೂಲುಪಾಕ ಬಂದೊಡನೆ ಯಿಳಿಸಿ ಶೀಸೆಗೆ ಹಾಕಿಟ್ಟು ಮಕ್ಕಳ ಅಜೀರ್ಣ ಮುಂತಾದ ಕಾಯಿಲೆಗೆ ಕೊಡಲು ಗುಣವಾಗುತ್ತೆ.

★ ★ ★

ಕಿಕ್ಕೇರಿಯಿಂದ ನಾಲ್ಕು ಮೈಲಿ ಪ್ರತಿದಿನ ದೊಡ್ಡತರ ಹಳ್ಳಿಗೆ ನಡೆಯುವುದು. ಶ್ರಮ ಆಗುತ್ತಿತ್ತು. ಹೊಸ ಪೀಳಿಗೆ, ಬೆಳಗೊಳದ ಆಸ್ಪತ್ರೆಗೆ ಒಲವು ತೋರಿಸಿತು. ಹಳಬರು ಇವರನ್ನು ಅಪೇಕ್ಷಿಸಿದರೂ, ವೈದ್ಯ ಶಾಲೆಗೆ ಬರುವವರು ಕಡಿಮೆ ಆದರು.

ಇದನ್ನು ಮೇಲಧಿಕಾರಿಗಳ ಗಮನಕ್ಕೆ ತಂದು ಕಿಕ್ಕೇರಿಗೆ ಮತ್ತೆ ವೈದ್ಯಶಾಲೆ ಸೇರಲು ಸಫಲರಾದರು. ಆದರೆ ಈ ನಡುವೆ ಬಸ್‌ಗಳ ಸಂಚಾರ ಹೆಚ್ಚಾಗಿ ಜನ ಅತ್ತಿಗುಪ್ಪೆ, ಚನ್ನರಾಯ ಪಟ್ಟಣ ನಾಗಮಂಗಲ ಹಿರೋಡೆ ಮುಂತಾದ ಕಡೆ ಇದ್ದ ಆಸ್ಪತ್ರೆಗಳನ್ನು ಅವಲಂಬಿಸಲು ಆರಂಭಿಸಿದ್ದರು. ತೀವ್ರವಾದ ವ್ಯಾಧಿಗಳಿಗೆ ಹಾಸನ, ಮೈಸೂರು ದಾರಿ ಹಿಡಿಯುತ್ತಿದ್ದರು. ಕುಪ್ಪಿ ಮಾತ್ರೆಗಿಂತಲೂ ಆಸ್ಪತ್ರೆಯ 'ಸೂಜಿ' ಪ್ರಯೋಗ ಆಕರ್ಷಕವಾಗಿ ಇತ್ತು. ಸಂಸ್ಥಾನದಲ್ಲಿ ಆಯುರ್ವೇದ ಪದ್ಧತಿಗೆ ಜನರ ಪ್ರೋತ್ಸಾಹ ಇಳಿಮುಖವಾಯಿತು. ಅದರೊಂದಿಗೆ ಪಂಡಿತರ ಉತ್ಸಾಹವೂ ಕಡಿಮೆ ಆಯಿತು. 1919ರಲ್ಲಿ ಪಂಡಿತರು ಮಾಡಿದ ಸೇವೆ ಜನ ಮರೆತರು ! ಆದರೂ ವೆಂಕಟಸುಬ್ಬಾ ಪಂಡಿತರು ಧೃತಿಗೆಡದೆ ತಮ್ಮ ವೃತ್ತಿಯಲ್ಲಿ ಹೆಜ್ಜೆ ಹಾಕಿದರು. ಬಿಡುವಿನ ವೇಳೆಯಲ್ಲಿ ಓಲೆಗರಿ ಗ್ರಂಥದಲ್ಲಿ ಹಿರಿಯರು ಬರೆದಿಟ್ಟ ಪಾಠಗಳನ್ನು ಕಾಗದದ ಮೇಲೆ ಬರೆದು ಕ್ರೋಡೀಕರಿಸಲು ಆರಂಭಿಸಿದರು.

ಬೆಳಗೊಳದಲ್ಲಿ ಇದ್ದಷ್ಟು ಅನುಕೂಲ ಕಿಕ್ಕೇರಿಯಲ್ಲಿ ಇರಲಿಲ್ಲ. ವೈದ್ಯಶಾಲೆಗೆ ಸ್ವಂತ ಕಟ್ಟಡ ಇರಲಿಲ್ಲ. ಒಂದು ಮಳಿಗೆಯನ್ನು ಬಾಡಿಗೆಗೆ ತೆಗೆದುಕೊಂಡರು.

ಸಂಬಳವನ್ನು ನೆಚ್ಚಿದವರಲ್ಲ ಅವರು. ಜಮೀನಿನಿಂದ ರಾಗಿ ಅವರೆ ಹುಣಿಸೆಹಣ್ಣು, ಭತ್ತ ಇತ್ಯಾದಿ ವರ್ಷಕ್ಕೆ ಆಗುವಷ್ಟು ಬರುತ್ತಿತ್ತು, ಮನೆಯಲ್ಲಿ ಕರೆಯುವ ಎಮ್ಮೆ ಇತ್ತು.

ಕರೆಯುವ ಈ ಎಮ್ಮೆಯದು ಒಂದು ಸ್ವಾರಸ್ಯವಾದ ಕತೆ. ವೈದ್ಯಶಾಲೆಯಲ್ಲಿದ್ದು ಮಧ್ಯಾಹ್ನಕ್ಕೆ ಮುಂಚೆ ಮನೆಗೆ ಬಂದು ಮತ್ತೆ ಸ್ನಾನ ಮಾಡಿ ದೇವರ ಪೂಜೆ ಮಾಡುವ, ನಂತರ ಊಟ ಮಾಡುವ, ನಿತ್ಯಕ್ರಮ ಆರಂಭಿಸಿದ್ದರು.

ಅದೊಂದು ದಿನ ದೇವತಾರ್ಚನೆಗೆ ಆಸೀನರಾಗಿ, ಸಂಕಲ್ಪ ಮಾಡಿದ್ದಾರೆ. ಯಾರೋ ಕೂಗಿದ ಶಬ್ದ ಕೇಳಿಸಿತು. ಹಳ್ಳಿಯಿಂದ ಗಂಡ ಹೆಂಡತಿ ಬಂದಿದ್ದಾರೆ. ಹೆಗಲ ಮೇಲೆ ಮಗು ; ವಿಪರೀತ ಜ್ವರ ಅದಕ್ಕೆ . ಪಾಪ, ವಿಹ್ವಲರಾಗಿ ಇದ್ದಾರೆ. ಸುದ್ಧಿ ಕೇಳಿದ ಪಂಡಿತರು ಮೇಲೆ ಏಳುವ ಸ್ಥಿತಿಯಲ್ಲಿ ಇರಲಿಲ್ಲ, ಮಡಿ ! ಸ್ವಲ್ಪ ವಿಭೂತಿಯನ್ನು ನೀರಿನಿಂದ ಪ್ರೋಕ್ಷಿಸಿ ಮಂತ್ರ ಹೇಳಿ ನಾಲ್ಕು ಸಣ್ಣ ಪೊಟ್ಟಣಗಳನ್ನು ಕಟ್ಟಿ ಕೊಟ್ಟರು. ''ನಾಲ್ಕು ಹೊತ್ತು ಸ್ವಲ್ಪ ಸಕ್ಕರೆ ಬೆರೆಸಿ ಹಾಲಿನಲ್ಲಿ ಸೇರಿಸಿ ಮಗುವಿಗೆ ಕುಡಿಸಬೇಕು. ಮಾರನೆಯ ದಿನ ಸ್ವಲ್ಪ ಮುಂಚಿತವಾಗಿ ವೈದ್ಯಶಾಲೆಗೆ ಬಂದು ನೋಡಬೇಕು.''

ಪ್ರಸಂಗ ಮರೆತು ಹೋಯಿತು. ಒಂದು ದಿನ ಒಬ್ಬ ಹಳ್ಳಿಯವನು ಒಂದು ಎಮ್ಮೆಯನ್ನು ಮನೆಯ ಬಾಗಿಲಿನ ಚಿಲಕಕ್ಕೆ ಹಗ್ಗದಿಂದ ಕಟ್ಟಿದನು. ಪಂಡಿತರು 'ಏನು ಬೇಕು ನಿನಗೆ ; ಎಮ್ಮೆಗೆ ನೀರು ಬೇಕೆ' ಎಂದು ಕೇಳಿದರು.

'ಅಯ್ಯ ಬುದ್ಧಿ ; ಅವತ್ತು ಎರಡು ವಾರದ ಹಿಂದೆ ಮಗುವಿಗೆ ನೀವು ಔಷಧಿ ಕೊಡಲಿಲ್ಲವ. ಒಂದೇ ದಿನದಲ್ಲಿ ಮಗುವು ಜ್ವರ ಕಳೆದುಕೊಂಡು ಕಿಲಕಿಲ ಅಂತ ಆಟ ಆಡ್ತು. ನನ್ನ ತಾಕೆ ದುಡ್ಡಿಲ್ಲ. ಹಾಲ್ಕೊಡೋ ಮೂರು ಎಮ್ಮೆ ಇತ್ತು. ತಂದು ಒಂದು ಕಟ್ಟಿದೀನಿ. ವೈನಾದ ಎಮ್ಮೆ ಇದು, ಒಪ್ಪಿಸಿಕೊಳ್ಳಿ. ಮನೆ ಮಕ್ಕಳು ಹಾಲು ಬೆಣ್ಣೆ ಉಣ್ಲಿ. ಬರ್ತೀನಿ ಬುದ್ಧಿ ಎಂದು ಹೊರಟೇ ಬಿಟ್ಟ!''

ಎಮ್ಮೆಯ ಹಾಲು ಮಂದ ! ಆದರೆ ಮನೆಯಲ್ಲಿ ಕಾಫಿ ಬಲು ರುಚಿ ! ಮನೆಯಲ್ಲಿ ಯಾವಾಗಲೂ ಗಟ್ಟಿ ಹಾಲು, ಮಜ್ಜಿಗೆ, ಮೊಸರು, ಬೆಣ್ಣೆ ಮನೆಯಲ್ಲಿ ಇರುತ್ತಿತ್ತು... ನೆರೆಯವರಿಗೆ ಗಟ್ಟಿ ಮಜ್ಜಿಗೆ ಕಳಿಸಿ ಕೊಡುತ್ತಿದ್ದರು. ಪಶು ಸಂಪತ್ತು ಎನ್ನುವುದು ಇದಕ್ಕೆ ಇರಬೇಕು ! ಇದು ನಮ್ಮ ತಾಯಿಯವರಿಂದ ತಿಳಿದ ಸಂಗತಿ

★ ★ ★

ನನ್ನ ಎರಡನೆ ಅಣ್ಣ ಆಯುರ್ವೇದ ವಿದ್ವಾಂಸರು. ವಿಠಲಾಪುರದ ಡಾಕ್ಟರು, ಸೀನಪ್ಪ ಡಾಕ್ಟರು ಎಂದು ಖ್ಯಾತಿ ಪಡೆದು ವಂಶದ ಹೆಸರು ಉಳಿಸಿದವರು. ಈ ಕತೆ ಕಿವಿಗೆ ಬಿದ್ದಾಗ ಅವರನ್ನು ಕೇಳಿದೆ ''ಈ ಔಷದೋಪಚಾರಕ್ಕೆ, ನೀವು ಏನು ಹೇಳುತ್ತೀರಿ ?''

''ನೋಡು ರಾಮು, ನಂಬಿಕೆಯು ಇದಕ್ಕೆ ಆಧಾರ''

''ತೊಟ್ಟಿಲ ಮಗುವಿಗೆ ಎಂತಹ ನಂಬಿಕೆ ?''

''ಮಗುವಿಗಲ್ಲ; ಮಗುವಿನ ಪೋಷಕರಿಗೆ ಇರುವ ನಂಬಿಕೆ ! ಔಷಧವನ್ನು ಉಪಯೋಗಿಸಿದ್ದೇವೆ ಗುಣವಾಗುತ್ತದೆ ಎಂಬ ಅವರ ನಂಬಿಕೆ. ತತ್ಪರಿಣಾಮ ಮನೆಯಲ್ಲಿ ನಿರಾಂತಕದ ದಿನಚರಿ ; ತಾಯಿಯ ತೊಡೆಯ ಮೇಲಿನ ಮಗುವಿನ ಹಣೆಗೆ ಚಿಂತಾರಹಿತ ಹಸ್ತಸ್ಪರ್ಶ ! ಇವು ಪವಾಡ ಸದೃಶ. ವಿಭೂತಿಯೇನು, ಮಣ್ಣೂ ಫಲಪ್ರದ!''

''ಆಸ್ಪತ್ರೆಗಳಲ್ಲಿ Rounds ಬರುವ 'ದೊಡ್ಡ' ಡಾಕ್ಟರು ರೋಗಿಯ ಹಣೆಯನ್ನು ಸ್ಪರ್ಶಿಸಿ , ಮುಂದಿನ ಹಾಸಿಗೆಗೆ ತೆರಳುತ್ತಾರೆ. ಅವರು ಬರದೆ ಇದ್ದರೆ ಅಂದು ರೋಗಿಯ ಮನೋಭಾವ ಎಷ್ಟು ಋಣಾತ್ಮಕ ಗೊತ್ತೆ! ''

★ ★ ★

ಅಮ್ಮನಿಗೆ ಹಸುಕಟ್ಟುವ ಆಸೆ, ಆದರೆ ಮನೆಗೆ ಬಂದದ್ದು ಮಹಿಷಿ !

ಹಸುವಿಗಿಂತಲೂ ಎಮ್ಮೆ ಕೊಡುವುದು ಹಲವು ಪಾಲು ಹೆಚ್ಚು. ಹಾಲು ಮೊಸರು ಮನೆಯಲ್ಲಿ ಅಕ್ಕ ಪಕ್ಕದವರಿಗೆ ಗಟ್ಟಿ ಮಜ್ಜಿಗೆ ಕಳುಹಿಸುತ್ತಿದ್ದರು.

ಕಿಕ್ಕೇರಿಯಲ್ಲಿ ಬೇಕಾದವರು ಬಹಳ ಜನ ಇದ್ದರು. ಆದರೆ ಶ್ರವಣಬೆಳಗೊಳದ ಜನರಂತೆ ಆರ್ಥಿಕವಾಗಿ ಸದೃಢರಲ್ಲ. ಪಂಡಿತರು ಮೂರಕ್ಕೆ ಬೀಳದೆ ಆರಕ್ಕೆ ಏರದೆ ತಮ್ಮ ಪಾಡಿಗೆ ತಾವು ಶಾಂತವಾಗಿ ಬಾಳಿದರು. ಹೆಚ್ಚು ಮಂದಿ ನೇಯ್ಗೆಯವರು, ಶ್ರಮಜೀವಿಗಳು, ಶುಕ್ರವಾರದ ಸಂತೆಯ ವೇಳೆಗೆ ಒಂದೆರಡು ಸೀರೆ, ಪಂಚೆ ನೆಯ್ದರೆ ಆಯಿತು. ಅದರ ಮಾರಾಟದಿಂದ ವಾರದ ಬದುಕು. ಹತ್ತು ಮನೆ ವೈಶ್ಯರು. ಅಂಗಡಿ ಬೀದಿಯಲ್ಲಿ ಅವರ ವಾಸ. ಊರಿನ ಒಳಗೆ ಪ್ರಸಿದ್ಧವಾದ ಈಶ್ವರ ದೇವಸ್ಥಾನ, ಎರಡು ನರಸಿಂಹ ಸ್ವಾಮಿ ದೇವಸ್ಥಾನಗಳು. ಹೊರಗೆ ಊರ ದೇವತೆ, ಕಿಕ್ಕೇರಮ್ಮನ ಗುಡಿ. ಊರಿನ ಹಾಗೂ ಸುತ್ತಮುತ್ತಲ ಗ್ರಾಮಗಳ ಧರ್ಮದ ಆಚರಣೆಗೆ ಬೆಂಬಲವಾದ ಒಂಭತ್ತು ಜೋಯಿಸರು, ಒಂಭತ್ತು ಶಾಸ್ತ್ರಿಗಳು, ಒಂಬತ್ತು ಪುರಾಣಿಕರು, ಒಂಬತ್ತು

ಭಟ್ಟರು ಇವರುಗಳ ಮನೆಗಳು ಇವಲ್ಲದೆ ಹತ್ತಾರು ಶಾಲಾ ಉಪಾಧ್ಯಾಯರು, ಅಕ್ಕಪಕ್ಕದ ಗ್ರಾಮಗಳ ಶ್ಯಾನುಭೋಗರ ಮನೆಗಳು. ಕೆಲವು ಮುಸಲ್ಮಾನ ಕುಟುಂಬಗಳು, ಬಡಗಿಗಳು, ಚಿನಿವಾರರು ಕುಂಬಾರರು ಮತ್ತುಇತರ ಕುಲಕಸಬಿನ ಜನ. ನೆನಸಿಕೊಂಡರೆ ಕಿಕ್ಕೇರಿಯ ಜನ 'ಪರಸ್ಪರ ಅವಲಂಬಿಸಿದ್ದೇವೆ' ಎಂಬ ಅರಿವೇ ಇಲ್ಲದೆ ಶಾಂತಿಯಿಂದ ಬಾಳುತ್ತಿದ್ದ ಜನತೆ. ಇವರ ನಡುವೆ ನಮ್ಮದು ಒಂದು ಪಂಡಿತರ ಮನೆ.

ವೆಂಕಟರಮಣ, ಶ್ರೀನಿವಾಸ ಮಿಡಲ್ ಸ್ಕೂಲ್ ದಾಟಿದ್ದರು. ಹೈಸ್ಕೂಲು ಓದಲು ಮೈಸೂರು ಸೇರಿದರು. ಗಂಗಕ್ಕ, ಸುಬ್ಬಕ್ಕ ಬೆಳೆಯುತ್ತಿರುವ ಹೆಣ್ಣುಮಕ್ಕಳು. ಈಗಿನಿಂದಲೇ ವರಾನ್ವೇಷಣೆ ಮಾಡಿಕೋಬೇಕು. ಅವರ ಮದುವೆಯ ಚಿಂತೆ. ಸಂಸಾರದ ಜವಾಬ್ದಾರಿ ಹೆಚ್ಚಾಗುತ್ತ ಬಂದಿತ್ತು. 1927 ಆಗಸ್ಟ್‌ನಲ್ಲಿನಾನು ಹುಟ್ಟಿದೆ. ಈ ಕಾಲದಲ್ಲಿ ಅಕ್ಕ ಶಾರದೆ, ಐದು ವರ್ಷದ ಹುಡುಗಿ. ಗಂಗಕ್ಕ , ಸುಬ್ಬಕ್ಕ ಇಬ್ಬರೂ ಅಚ್ಚುಕಟ್ಟಾಗಿ ಮನೆ ನಿರ್ವಹಿಸಿದರು. 1928ರಲ್ಲಿ ಗಂಗಕ್ಕನ ಮದುವೆ ಆಗಿರಬೇಕು. ಕೊತ್ವಾಲ್ ರಾಮಯ್ಯ ರಸ್ತೆಯಲ್ಲಿದ್ದದ್ದು ಬಾಲಯ್ಯನವರ ಮನೆ. ಅವರ ಮನೆಯಲ್ಲಿ ವಿಧವೆ ತಾಯಿ ನಂಜಮ್ಮ ಮಗ ವೆಂಗಟರಾಮಯ್ಯ. ವೆಸ್ಲಿಪ್ರೆಸ್‌ನಲ್ಲಿ ಕೆಲಸ. ಸ್ವಂತ ಮನೆ. ಗಂಗ ಸೊಸೆಯಾಗಿ ಬಾಲಯ್ಯನವರ ಮನೆ ತುಂಬಿದಳು. ಮತ್ತೆ ಮೈಸೂರು ಓಡಾಟ ಶುರುವಾಯಿತು. 1929ರಲ್ಲಿ ಸುಬ್ಬಕ್ಕನ ಮದುವೆ. ಚಾಮರಾಜನಗರದ ದಿವಂಗತ ಬ್ಯಾಂಕ್ ರಾಮಣ್ಣನವರ ಪತ್ನಿ ವೆಂಕಮ್ಮ, ವೆಂಕಟಕೃಷ್ಣ, ರಾಮಣ್ಣನವರ ತಮ್ಮನ ಮಗ ; ನಂತರದಲ್ಲಿ ವೆಂಕಮ್ಮನವರ ದತ್ತುಮಗ. ಸುಬ್ಬಕ್ಕನನ್ನು ವೆಂಕಟಕೃಷ್ಣಯ್ಯನಿಗೆ ಕೊಟ್ಟು ಶ್ರೀರಂಗ ಪಟ್ಟಣದ ಶ್ಯಾಮು ತಾತನ ಮನೆಯಲ್ಲಿ ಮದುವೆ ಆಯಿತು. ನಾನು ಆಗ ಎರಡು ವರ್ಷದ ಅಂದದ ಕೂಸಂತೆ. ಮದುವೆ ಮನೆಯ ಎಲ್ಲರ ಕಂಗಳಿಗೂ ನಾನು ಬೇಕು ! ಗಂಗಕ್ಕನನ್ನು ನಾನು ಎಡೆ ಬಿಡುತ್ತಿರಲಿಲ್ಲವಂತೆ. ಅಮ್ಮನ ಹೊಟ್ಟೆಯಲ್ಲಿ ಮಗುವಿತ್ತು. ಸುಬ್ಬಕ್ಕನ ಮದುವೆ ಆದ ತರುಣದಲ್ಲಿ ಜಯಮ್ಮನ ಜನನ, 1929ರಲ್ಲಿ.

ಸಂಸಾರದ ಜವಾಬ್ದಾರಿ ಹೆಚ್ಚಾಯಿತು. ಹೆಣ್ಣು ಮಕ್ಕಳನ್ನು ಮನೆಗೆ ಕರೆಸಿಕೊಳ್ಳುವುದು, ಕಳುಹಿಸುವುದು, ನೆರವಿಗೆ ಎದುರು ಮನೆಯಲ್ಲಿಯೇ ನಮ್ಮ ತಾಯಿಯ ದೊಡ್ಡಮ್ಮ, ಕಿಕ್ಕೇರಿಯಲ್ಲಿ ಇದ್ದರು. ತಾಯಿಯಿಲ್ಲದ ನಮ್ಮ ಅಮ್ಮನಿಗೆ ತಾಯಿ ಇಲ್ಲಎನಿಸದಂತೆ ಮನೆಗೆ ಬಂದು ಪ್ರೀತಿ ತುಂಬುತ್ತಿದ್ದರು. ದಿವಗಂತ ಕೃಷ್ಣ ಭಟ್ಟರ ಮಡದಿ ಅವರು. ಮನೆ ತೋಟ ತುಡಿಕೆ ಎಲ್ಲಾ ಶ್ರೀಮಂತವಾಗಿ ಇತ್ತು. ಅವರ ಮಗ ನಾರಾಯಣ

ಭಟ್ಟರು. ಪೌರೋಹಿತ್ಯದ ಕಸಬಿನ ಜೊತೆಗೆ ತೋಟ ಗದ್ದೆ ಎಲ್ಲಾ ಚೆನ್ನಾಗಿ ಸಿರ್ವಹಿಸಿ ಮಾನ್ಯರಾಗಿ ಇದ್ದರು.

ನಾಗಜ್ಜಿಯ ಸಂಬಂಧ ಸೀನಿಯರ್ ಸರ್ಜನ್ ಸುಬ್ಬರಾಯರು ಎಂದು ಹಿಂದೆಯೇ ಹೇಳಿದೆ. ನಮ್ಮ ತಾತ ಶ್ರೀರಂಗಪಟ್ಟಣದ ಶಾಮುವು ಅವರನ್ನು ಕಂಡು ವೆಂಕಟರಮಣನಿಗೆ ಮೆಡಿಕಲ್ ಸ್ಕೂಲಿಗೆ 1928ರಲ್ಲಿ ಪ್ರವೇಶ ದೊರಕಿಸಿದರು.

ಇದೇ ವರ್ಷ ಶ್ರೀನಿವಾಸನಿಗೆ ಎಸ್.ಎಸ್.ಎಲ್.ಸಿ. ಆಯಿತು. ಮೈಸೂರು ವಸ್ತು ಪ್ರದರ್ಶನದಲ್ಲಿ ಶ್ರೀನಿವಾಸನೊಡನೆ ನಮ್ಮ ತಂದೆ ನಡೆಯುತ್ತಿದ್ದಾಗ ಎದುರಿಗೆ ಆಯುರ್ವೇದ ಕಾಲೇಜಿನ ಪರಿಚಿತ ಮಿತ್ರರು ಸಿಕ್ಕಿ, ಶ್ರೀನಿವಾಸನನ್ನು ಆಯುರ್ವೇದ ಕಾಲೇಜಿಗೆ ಸೇರಿಸಲು ಸಲಹೆ ನೀಡಿದರು.

'ಶ್ರೀನಿವಾಸಮೂರ್ತಿ ಆಯುರ್ವೇದ ಕಾಲೇಜು ಸೇರಿದ. ಇಬ್ಬರು ಮಕ್ಕಳ ವೈದ್ಯ ವಿದ್ಯಾಭ್ಯಾಸ. ನಮ್ಮ ತಾಯಿಗೆ ಆನಂದವೋ ಆನಂದ. ಅವರನ್ನು ಚಿನ್ನಮ್ಮ ಎಂದು ಕರೆಯುತ್ತಿದ್ದರು. 'ಏನು ಚಿನ್ನಾ, ಅದೃಷ್ಟವಂತೆ ಗಂಡ ವೈದ್ಯರು ; ಇಬ್ಬರು ಮಕ್ಕಳು ಡಾಕ್ಟರರಾಗಿ ಬಂದು ಬಿಡುತ್ತಾರೆ. ಇಬ್ಬರು ಹೆಣ್ಣುಮಕ್ಕಳಿಗೆ ಮದುವೆ ಮಾಡಿದೀಯ. ನಿನ್ನನ್ನು ಹಿಡಿಯುವವರು ಯಾರು!' ಅಭಿಮಾನದಿಂದ ದೊಡ್ಡಮ್ಮ ಹೇಳುತ್ತಿದ್ದರು.

ಮನೆಯಲ್ಲಿ ಸಂಸಾರದ ಜವಾಬ್ದಾರಿ ಹೆಚ್ಚಾಗಿ ಇತ್ತು. ಇಬ್ಬರು ಮಕ್ಕಳು ಹೊರಗೆ ಕಾಲೇಜು ವಿದ್ಯಾಭ್ಯಾಸದಲ್ಲಿ ಇದ್ದರು. ಮನೆಗೆ ಹೋಗಿ ಬಂದು ಮಾಡುವ ಬಂಧುಗಳು; ಸುತ್ತ ಮುತ್ತ ಗ್ರಾಮಗಳ ಬ್ರಾಹ್ಮಣ ಮಕ್ಕಳು ಕಿಕ್ಕೇರಿಯಲ್ಲಿದ್ದು ಮಿಡಲ್ ಸ್ಕೂಲ್ ಓದುತ್ತಿದ್ದರು. ಇಬ್ಬರು ಮೂವರಿಗೆ ವಾರ ಕೊಟ್ಟಿದ್ದರು. ನಮ್ಮ ತಾಯಿ 'ಅನ್ನಪೂರ್ಣೆ' ಆಗಿದ್ದರು. 1929ರಲ್ಲಿ ಜಯ ಹುಟ್ಟಿದಳು. ಎದುರು ಮನೆಯಲ್ಲಿದ್ದ ದೊಡ್ಡಮ್ಮ ನೆರವಾದರು.

ಕಿಕ್ಕೇರಿಯಲ್ಲಿ ಅನೇಕ ಆಪ್ತೇಷ್ಟರು ಇದ್ದರು. ಜನಾಬ್ ಖುದೂಸ್ ಬೇಗ್, ಅವರ ಹಬ್ಬದ ದಿನ, ದ್ರಾಕ್ಷಿ, ಬಾದಾಮಿ, ಖರ್ಜೂರ ತುಂಬಿದ ತಟ್ಟೆಯಲ್ಲಿ ಹಣದ ಲಕೋಟೆ ಇಟ್ಟು ಗೌರವಿಸುತ್ತಿದ್ದರು. ಎರಡು ಮೂರು ವರ್ಷಕ್ಕೆ ಒಮ್ಮೆ ನಶ್ಯದ ಬಣ್ಣದ ಸರ್ಜ್‌ಕೋಟು ಹೊಲಿಸಿ ತಟ್ಟೆಯೊಡನೆ ಇಡುತ್ತಿದ್ದರು.

ಅನೇಕ ನೇಕಾರರು ವರ್ಷಕ್ಕೆ ಒಮ್ಮೆ ಅವರು ನೇಯ್ದ ವಸ್ತ್ರಗಳನ್ನು ಗೌರವದಿಂದ ಕೊಡುತ್ತಿದ್ದರು.

1931ರಲ್ಲಿ ಮೆಡಿಕಲ್ ಸ್ಕೂಲ್‌ನಲ್ಲಿ ಓದುತ್ತಿದ್ದ ವೆಂಕಟರಮಣನ ಮದುವೆ ಶಿವಮೊಗ್ಗದಲ್ಲಿ ಪ್ರಖ್ಯಾತರಾದ ಚಿನಿವಾರ ದೇವರಪ್ಪನವರ ಎರಡನೆಮಗಳು ಹನ್ನೊಂದು ವರ್ಷದ ಸೀತಾಲಕ್ಷ್ಮಿಯೇ ವಧು. ಮನೆಯಲ್ಲಿ ಸಂಭ್ರಮ!

ಸ್ವಲ್ಪ ದಿನದಲ್ಲಿಯೇ ಮೈಸೂರಿನಲ್ಲಿ ಗಂಗಕ್ಕ ಜ್ವರದಿಂದ ಕೆ.ಆರ್. ಆಸ್ಪತ್ರೆ ಸೇರಿದಳು. ಗುಣವಾಗಿ ಮನೆ ಏನೋ ಸೇರಿದಳು. ಆದರೆ ನಿತ್ರಾಣಳಾದಳು. ಚಿಕ್ಕೇರಿಯಿಂದ ಆಗಾಗ ಮೈಸೂರಿಗೆ ಹೋಗಿ ಶಕ್ತಿ ಕೊಡುವ ಲೇಹಗಳನ್ನು ಮಾಡಿಕೊಟ್ಟು ನೋಡಿಕೊಂಡು ಬರುತ್ತಿದ್ದರು. ಈ ನಡುವೆ ಗರ್ಭಪಾತ ಆಯಿತು. ಕ್ಷಯ ರೋಗವೆಂದು ಆಸ್ಪತ್ರೆಯ ವೈದ್ಯರು ತೀರ್ಮಾನಿಸಿದರು. ಮಾರ್ಚಿ 22, 1933ರಲ್ಲಿ ಅವಳು ಕೊನೆಯುಸಿರೆಳೆದಳು.

ಸಂಸಾರದಲ್ಲಿ ಸಿಡಿಲು ಬಡಿದಂತಾಯಿತು. ತಂದೆ ತಾಯಿಯರ ಮನೋಸ್ಥೈರ್ಯ ಉಡುಗಿತು. ಶ್ರೀರಂಗಪಟ್ಟಣದಲ್ಲಿ ತಾತ ಶಾಮು (ನಂಜುಂಡಯ್ಯನವರು) ನಿಧನರಾದರು. ಸುಬ್ಬಕ್ಕ ಗರ್ಭಿಣಿಯಾಗಿ ತವರಿಗೆ ಬಂದಿದ್ದಳು. ಸೂರ್ಯನಾರಾಯಣ ಹೈಸ್ಕೂಲು ಓದಲು ಮೈಸೂರು ಸೇರಬೇಕಾಗಿತ್ತು. ದುಃಖವನ್ನು ಪಕ್ಕಕ್ಕೆ ಸರಿಸಿ ದಿನಚರಿ ಮೊದಲಾಗಿತ್ತು.

1933ರಲ್ಲಿ L.M.P. ಪದವಿಗಳಿಸಿದ ಡಾ|| ವೆಂಕಟರಮಣಯ್ಯ ತಾತ್ಕಾಲಿಕ ವಾಗಿ ಮೈಸೂರಿನ ಕೆ.ಆರ್. ಮಿಲ್ಸ್‌ನ ವೈದ್ಯಾಧಿಕಾರಿ ಆದರು. ಇವರನ್ನು ನಾವೆಲ್ಲ ಅಣ್ಣಯ್ಯ ಎಂದು ಕರೆಯುತ್ತಿದ್ದೆವು. ಪ್ರಥಮ ರ್‍ಯಾಂಕ್‌ನೊಂದಿಗೆ L.A.M.S. ಪದವಿಗಳಿಸಿದ ಡಾ. ಎಸ್.ವಿ. ಶ್ರೀನಿವಾಸಮೂರ್ತಿ ನಮ್ಮ ತಂದೆಗೆ ಅನುವಾಗಿ ಊರಿನಲ್ಲೇ ವೈದ್ಯರಾದರು. ಇವರೇ ಮನೆಯಲ್ಲಿ 'ಸೀನಣ್ಣ'. ಮೋಡದ ಅಂಚಿನಲ್ಲಿ ಬಿಳಿಯ ಮಿನುಗು ಕಾಣಿಸಿತು!

ಸೀನಣ್ಣ ಊರಿಗೆ ಬಂದ ತರುಣದಲ್ಲಿ ಮಾದಾಪುರದ ಮಾವ ರಾಮ ಮೋಹನ ಕಂಪೆನಿಯವರ ಉತ್ತರ ಪ್ರವಾಸ ಹೊರಟರು ಊರಿನಲ್ಲಿ ಶ್ಯಾನುಭೋಗಿಕೆ ಮತ್ತು ಇತರ ವ್ಯವಹಾರಗಳನ್ನು ನೋಡಿಕೊಳ್ಳಲು ಸೀನಣ್ಣನನ್ನು ಅಪೇಕ್ಷಿಸಿದರು. ಅವರು ಒಬ್ಬನಿಗೇ ಬೇಜಾರಾಗುತ್ತದೆಂದು ಆಡುವ ಮಗು ಜಯಳನ್ನು ಜೊತೆಗೆ ಕರೆದುಕೊಂಡು ಹೋದರು.

ಮಕ್ಕಳಿಲ್ಲದಿದ್ದ ಈ ಮನೆಯಲ್ಲಿ ಜಯಳ ಮುದ್ದು ಮಾತು, ಓಡಾಟ, ಕುಣಿದಾಟವು ಅಚ್ಚತ್ತೆ ಸಾವಿತ್ರತ್ತೆನಾಗ ಮಾವ ಎಲ್ಲರಿಗೂ ಅಪ್ಯಾಯಮಾನ ಆಯಿತು. ಮನೆಯ ಯಜಮಾನ ಇನ್ನು ಸ್ವಲ್ಪ ದಿನ ಯಾತ್ರೆ ಮಾಡಿ ಬರಲಿ ಎಂದೆನಿಸಿರಬೇಕು ಅವರೆಲ್ಲರಿಗೂ!

ಮಾವ. ಯಾತ್ರೆ ಮುಗಿಸಿ ಬಂದವರು ಮಗುವು ನನ್ನ ಜೊತೆಯಲ್ಲಿಯೂ ಸ್ವಲ್ಪ ದಿನ ಇರಲಿ ಎಂದರು. ಮಾದಾಪುರದಿಂದ ಹಿಂತಿರುಗಿದ ಸೀನಣ್ಣನ ಮೇಲೆ ಅಮ್ಮನಿಗೆ ತುಂಬಾ ಅಸಮಾಧಾನ ಆಯಿತು. ಜಯ ಅಲ್ಲೇ ಉಳಿದಳು ! ಕಾಲ ಎಲ್ಲವನ್ನೂ ಮಾಗಿಸಿತು. ಜಯ ಮಾದಾಪುರದ ಮನೆಗೆ ಸಾಕು ಮಗಳಾದಳು.

ಅಣ್ಣಯ್ಯನಿಗೆ ಚಿಕ್ಕಮಗಳೂರು ಜಿಲ್ಲಾಸ್ಪತ್ರೆ. ಡಾಕ್ಟರಾಗಿ ಸರ್ಕಾರಿ ಆದೇಶ ಬಂದಿತು. ಅಲ್ಲಿ ಆರು ತಿಂಗಳು ಸೇವೆ ಮಾಡಿದ ಮೇಲೆ ಮೂಡಗೆರೆ ತಾಲ್ಲೂಕಿನ 'ನಿಡುವಾಲೆ'ಯ ಆಸ್ಪತ್ರೆಯ ವೈದ್ಯಾಧಿಕಾರಿಯಾಗಿ ನೇಮಕ ಹೊರಬಂತು. ಎದುರಿಗೆ ಹೇಮಾವತಿ ಹುಟ್ಟುವ ಜಾವಳಿ ಗುಡ್ಡ. ಸ್ವತಂತ್ರವಾದ ಹುದ್ದೆ, ವಸತಿಗೆ ಒಳ್ಳೆಯ ಮನೆ. ಅಣ್ಣಯ್ಯ 15 ವರ್ಷದ ಮಡದಿಯೊಂದಿಗೆ ಸಂಸಾರ ಹೂಡಿದರು. ಜೊತೆಗಿರಲು ನನ್ನನ್ನು ಅಲ್ಲಿಗ್ಗೆ ಪ್ರೈಮರಿ ಶಾಲೆಗೆ ಸೇರಿಸಿದರು.

1935ರಲ್ಲಿ ಶಾರದಕ್ಕನ ಲಗ್ನವಾಯಿತು. ವರ ಮಯಸಂದ್ರದ ಕೃಷ್ಣಮೂರ್ತಿ ಚಿಕ್ಕ ನರಸಿಂಹ ಜೋಯಿಸರ ಮಗ. ಈ ಮದುವೆಯಾದ ತರುಣದಲ್ಲೆ, ಸೀನಣ್ಣನ ಮದುವೆ ಆಯಿತು. ಕಿಕ್ಕೇರಿಯಲ್ಲೇ ವಾಸವಾಗಿದ್ದ ಕ್ಯಾತನಹಳ್ಳಿ ಶ್ಯಾನುಭೋಗ ಗುಂಡಪ್ಪನವರ ಮಗಳು ಸುಬ್ಬಲಕ್ಷ್ಮಿ ಕನ್ಯೆ.

ನಮ್ಮ ತಾಯಿಯ ಹೆಮ್ಮೆಯ ಮಾತು "ನಾನು ಈ ವಂಶಕ್ಕೆ ಸೇರುವ ಮೊದಲು ಒಬ್ಬೊಬ್ಬನೇ ಮಗ ; ನಾನು ಸೇರುತ್ತಲು ವಂಶ ಹೆಮ್ಮರವಾಯಿತು." ಮನಸ್ಸಿನ ಮೂಲೆಯಲ್ಲಿ ಗಂಗಕ್ಕ ಕಣ್ಮರೆಯಾದದ್ದು ಕುಳಿತಿರುತ್ತಿತ್ತು. ಸ್ವಾಭಾವಿಕವೆ!

ಬಳಗ ದೊಡ್ಡದಾಯಿತು ಶಾಪಿನಲ್ಲಿ ತಂದೆ ಮಕ್ಕಳ ವೈದ್ಯತನ. ಶಾಪು ಗಿಜಿಗಿಜಿ ಅನ್ನುತ್ತಿತ್ತು. ನಮ್ಮ ತಂದೆ ತಾಯಿ ಊರು ಬಿಟ್ಟು ಆಗಾಗ ನಿಡುವಾಲೆಗೆ ಹೋಗುತ್ತಿದ್ದರು. ನಿಡುವಾಲೆ ಅವರಿಗೆ ತುಂಬ ಆಕರ್ಷಕವಾಗಿ ಇತ್ತು. ಮಗನ ಮನೆ ಎಂದಷ್ಟೇ ಅಲ್ಲ, ಮನೆಯ ಹಿಂದೆ ನೈಸರ್ಗಿಕ ಸಸ್ಯ ಸಂಪತ್ತು ಇತ್ತು. ಬಯಲು ಸೀಮೆಯಲ್ಲಿ ಕಾಣಸದ ಅನೇಕ ಮೂಲಿಕೆಗಳನ್ನು ಸಂಗ್ರಹಿಸುತ್ತಿದ್ದರು ಅವರ ಮೂಲಿಕೆಗಳ ಜ್ಞಾನ ತುಡಿಯುತ್ತಿತ್ತು.

ಕಸದ ರಾಶಿಯಂತೆ ಕಾಣುತ್ತಿದ್ದ ಮೂಲಿಕೆಗಳ ಗಂಟನ್ನು ಕಿಕ್ಕೇರಿಗೆ ತೆಗೆದುಕೊಂಡು ಬರುತ್ತಿದ್ದರು.

1940ರ ವೇಳೆಗೆ ಮನೆ, ತುಂಬ ಮೊಮ್ಮಕ್ಕಳು. ಅಮ್ಮನಿಗೆ ಬಿಡುವಿಲ್ಲ. ಮನೆ ಯಾವಾಗಲೂ ಸಂಭ್ರಮದಿಂದ ಇರುತ್ತಿತ್ತು.

ಅಣ್ಣಯ್ಯ ನಿಡುವಾಲೆಯಿಂದ ಮಂಡ್ಯಕ್ಕೆ ವರ್ಗ ಆದರು.

ಮಂಡ್ಯದಲ್ಲಿ ಕೈಗೋನಹಳ್ಳಿಯ ಶ್ರೀಕಂಠ ಪಂಡಿತರೂ ಅವರ ಅಣ್ಣ ಅಡ್ವೋಕೇಟ್ ಲಕ್ಷ್ಮಿನಾರಾಯಣರಾಯರೂ ಹೆಸರುವಾಸಿಯಾಗಿದ್ದರು. ಅವರ ಮನೆಯ ಎಲ್ಲ ಶುಭ ಕಾರ್ಯಗಳಿಗೆ ನಮ್ಮನ್ನು ಮಮತೆಯಿಂದ ಕರೆದು ಸತ್ಕರಿಸುತ್ತಿದ್ದರು. 1940ರಲ್ಲಿ ಶ್ರೀಕಂಠಪಂಡಿತರ ಎರಡನೆಯ ಮಗ ಸುಬ್ಬಣ್ಣನವರಿಗೆ ನನ್ನ ತಂಗಿ ಜಯಲಕ್ಷ್ಮಿಯನ್ನು ಕೊಟ್ಟು ಮಾದಾಪುರದಲ್ಲಿ ವಿವಾಹ ಆಯಿತು. ಸಿ.ವಿ. ಪಂಡಿತರಿಗೆ ಜೋಡಿದಾರರ ಮನೆಯ ಹೆಣ್ಣು ಕೊಟ್ಟು ಸಂಬಂಧ ಬೆಳೆಸಿದ ನಮ್ಮ ವಂಶದ ಮೂಲವನ್ನು ಹಿಂದೆ ಹೇಳಿದೆ. ಈ ತಲೆಮಾರಿನಲ್ಲಿ ನಮ್ಮ ಮನೆಯ ಹೆಣ್ಣನ್ನು ಜೋಡೀದಾರರ ಮನೆಗೆ ತುಂಬಿಸಿದಂತಾಯ್ತು. ಎರಡು ಮನೆತನಗಳ ನಿಕಟ ಬಾಂಧ್ಯವ್ಯ ಅನ್ಯೋನ್ಯತೆ ಮುಂದುವರಿಯಿತು. ಸುಬ್ಬಣ್ಣ- ಜಯಮ್ಮ ದಂಪತಿಗಳು ಮಾದಾಪುರದಲ್ಲಿ ನೆಮ್ಮದಿಯಿಂದ ವಿಶ್ರಾಂತರಾಗಿ ಇದ್ದಾರೆ. ಅವರ ಮಕ್ಕಳು ಬೆಂಗಳೂರಿನಲ್ಲೂ, ವಿದೇಶದಲ್ಲೂ ಅಭಿವೃದ್ಧಿ ಹೊಂದಿದ್ದಾರೆ. ಕೈಗೋನ ಹಳ್ಳಿಯ ಎರಡು ಹೆಮ್ಮರಗಳು ಅಕ್ಕಪಕ್ಕ ಮೆರೆಯುತ್ತ ನಿಂತ ಭಾವ ಬರುತ್ತದೆ.

1941ರಲ್ಲಿ ಮಾದಾಪುರದ ಮಾದಾಪುರದ ಮಾವ ವೆಂಕಟೇಶ್ವರಯ್ಯನವರು ನಿಧನರಾದರು. ಕಿಕ್ಕೇರಿಗೆ ಆಸ್ಪತ್ರೆ ಬಂದು ವೆಂಕಟಸುಬ್ಬಾ ಪಂಡಿತರು ಬೂಕಿನ ಕೆರೆಗೆ ವರ್ಗವಾದರು.

ಆದದ್ದೆಲ್ಲಾ ಒಳ್ಳೇದಕ್ಕೆ ಎನ್ನುವ ದಾಸರ ಹಾಡಿನಂತೆ ಕಿಕ್ಕೇರಿಗೆ ಆಸ್ಪತ್ರೆಗೆ ಬಂದದ್ದು ಒಳ್ಳೆಯದೇ ಆಯಿತು. ಸಂಸಾರವನ್ನು ಕೆ.ಆರ್.ಯ ಪೇಟೆಯ ಸ್ವಂತ ಮನೆಗೆ ಸ್ಥಳಾಂತರಿಸಿದರು. ನಮ್ಮ ತಾಯಿಗೆ 'ನನ್ನ ಮನೆ' ಎನ್ನುವ ನೆರಳು ಬೇಕಿತ್ತು. ಅವರಿಗೆ ತುಂಬ ಸಂತೋಷವಾಯಿತು. ಹೊಸಹೊಳಲು ಮತ್ತು ಸುತ್ತ ಮುತ್ತಿನ ಜನಕ್ಕೆ ಸೀನಪ್ಪ ಡಾಕ್ಟರು ಬೇಕಿತ್ತು. ಅವರಿಗೆಲ್ಲ ಸಂತಸ ಆಯಿತು. ಬೂಕಿನ ಕೆರೆಯ ಪಕ್ಕವೇ ಚಟ್ಟಂಗೆರೆ. ಅವರು ಅಲ್ಲಿಂದ ಕಿಕ್ಕೇರಿಗೆ ಗಾಡಿ ಕಟ್ಟಿಸಿಕೊಂಡು ಬರಬೇಕಿತ್ತು. ಅದು ತಪ್ಪಿತು. ಪಂಡಿತರು ಅವರ ಬಾಗಿಲಿಗೇ ಬಂದರು.

ಸೀನಣ್ಣ ಕೆ.ಆರ್. ಪೇಟೆಯಲ್ಲಿ ಮಳಿಗೆಯಲ್ಲಿ ಔಷಧಾಲಯ ತೆಗೆದರು. ಬೆಳಗಿನ ಹೊತ್ತು ಅಲ್ಲಿದ್ದು ಮಧ್ಯಾಹ್ನದ ಮೇಲೆ ಹೊಸ ಹೊಳಲಿಗೆ ಹೋಗುತ್ತಿದ್ದರು. ಹೊಸ ಹೊಳಲು ಕೆ.ಆರ್. ಪೇಟೆಯ ಮುನಿಸಿಪಾಲಿಟಿಗೇ ಸೇರಿದ ಊರು ; ಅರ್ಧ ಮೈಲಿಯ ಅಂತರ ಎರಡು ಊರುಗಳಿಗೂ.

ಜಮೀನು ಇದ್ದ ಕೈಗೋನಹಳ್ಳಿ ಕೆ.ಆರ್. ಪೇಟೆಗೆ ನಾಲ್ಕು ಮೈಲಿ. ಅಕ್ಕಿ ಹೆಬ್ಬಾಳಿನ ಹರಿಹರಪುರ ಹೊಸ ಹೊಳಲಿನಿಂದ ನಾಲ್ಕು ಮೈಲಿ. ಗದ್ದೆ ಇದ್ದದ್ದು ಅಲ್ಲಿ.

ಪಂಡಿತರು ಒಬ್ಬರೇ ಬೂಕಿನಕೆರೆಯಲ್ಲಿ ಇದ್ದುಕೊಂಡು ಭಾನುವಾರ ಊರಿಗೆ ಬರುತ್ತಿದ್ದರು. ಒಂದು ವರ್ಷ ಕಳೆದು ವಿಶ್ರಾಂತರಾದರು, ಅಲ್ಲಿಗೆ ಆಸ್ಪತ್ರೆ ಬಂದು ದಬ್ಬುವುದಕ್ಕೆ ಮುಂಚೆ ! ಅಲ್ಲಿಗೆ ಆಸ್ಪತ್ರೆ ಬಂದರೂ ಅಲ್ಲಿಯ ಅನೇಕರು ಪಂಡಿತರ ಅವಲಂಬನೆ ಬಿಡಲಿಲ್ಲ. ಕೆ.ಆರ್. ಪೇಟೆಯ ಚಿಕಿತ್ಸಾಲಯಕ್ಕೇ ಬರುತ್ತಿದ್ದರು.

ನಾನು ಮೈಸೂರಿನಲ್ಲಿ ವಿದ್ಯಾಭ್ಯಾಸ ಮುಗಿಸಿ ಹೈಸ್ಕೂಲು ಅಧ್ಯಾಪಕನಾದೆ. ಕೆ.ಆರ್. ಪೇಟೆಯಲ್ಲೂ ಮೂರು ವರ್ಷ ಸೇವೆ ಸಲ್ಲಿಸಿ ಚಾಮರಾಜನಗರಕ್ಕೆ ವರ್ಗವಾಗಿ ನಂತರ ಕಾಲೇಜು ಅಧ್ಯಾಪಕನಾದೆ.

ನನ್ನ ತಮ್ಮ ಎಸ್.ಎಸ್.ಎಲ್.ಸಿ. ಆದ ನಂತರ ಸ್ಥಳದಲ್ಲೆ ಅಂಬಿಕಾ ಕಾಫಿ ವರ್ಕ್ಸ್ ಮತ್ತು ಜನರಲ್ ಸ್ಟೋರ್ಸಿನ ಒಡೆಯನಾದ.

ಹೊಸ ಹೊಳಲು ಪಕ್ಕದ ವಿಠಲಾಪುರದಲ್ಲಿ ಆಯುರ್ವೇದ ವೈದ್ಯಶಾಲೆ ತೆರೆಯಿತು. ಸೀನಣ್ಣನವರು ಅಲ್ಲಿಯ ವೈದ್ಯರಾಗಿ ನೇಮಕ ಹೊಂದಿದರು. ಸೀನಣ್ಣ ಹೊಸಹೊಳಲಿನಲ್ಲಿ ಸಂಸಾರಹೂಡಿ ನಿತ್ಯ ವಿಠಲಾಪುರಕ್ಕೆ ಹೋಗಿ ಬಂದು ದೂಡುತ್ತಿದ್ದರು.

1942ರಲ್ಲಿ ಸೂರ್ಯನಾರಾಯಣನ ಮದುವೆ ಚಾಮರಾಜನಗರದ ನರಹರಿರಾಯರ ಮಗಳು ಲಲಿತಳೊಡನೆ ಆಯಿತು. ಅವರ ಸಂಸಾರ ಮೈಸೂರು ಪ್ರಾಂತದ ಹೊರಗೆ. ಅಹಮದ್ ನಗರ ಡೆಲ್ಲಿ ಮದರಾಸು ರಾಯಪುರ ಇಲ್ಲೆಲ್ಲ ಸುತ್ತಿ ವಿಶ್ರಾಂತರಾಗುವ ವೇಳೆಗೆ ಬೆಂಗಳೂರಿಗೆ ಬಂದರು.

ನನ್ನ ಮದುವೆ ನಂಜನಗೂಡಿನಲ್ಲಿ 1948ರಲ್ಲಿ ನಡೆಯಿತು. ಲಾಯರು ಕೇಶವಯ್ಯನವರ ಮಗ ಸಿ.ಕೆ. ರಾಮಣ್ಣನವರ ಮಗಳು ಶಾಂತ, ಕನ್ಯ.

1958ರಲ್ಲಿ ಕೃಷ್ಣಸ್ವಾಮಿಯ ಮದುವೆ ಮತಿಘಟ್ಟದ ಗುಂಡಪ್ಪನವರ ಮಗಳು ಸುಶೀಲಳೊಂದಿಗೆ. ಪಂಡಿತರಿಗೆ ಸಂಸಾರದ ಮುಖ್ಯ ಜವಾಬ್ದಾರಿಗಳೆಲ್ಲಾ ಕಳೆದಿದ್ದವು. ಅವರು ಪ್ರತಿದಿನ ಔಷಧಾಲಯಕ್ಕೆ ಹೋಗುತ್ತಿದ್ದುದು, ಹಳೆಯ ಜನ, ಹುಡುಕಿಕೊಂಡು ಬರುವವರಿಗಾಗಿ. ದುಡಿಮೆಯ ಅವಶ್ಯಕತೆ ಇರಲಿಲ್ಲ.

ರೋಗಿಗಳ ಒತ್ತಡ ಇತ್ತಿಲ್ಲ. ನಿತ್ಯ ನಾಲ್ಕಾರು ಜನ ಇದ್ದೆ ಇರುತ್ತಿದ್ದರು. ಬಿಡುವಿನಲ್ಲಿ ಔಷಧಾಲಯದಲ್ಲಿ ಕುಳಿತು ತಮ್ಮ ಹಳೆಯ ಪುಸ್ತಕಗಳಿಂದ ಟಿಪ್ಪಣಿ ಮಾಡುತ್ತಿದ್ದರು. ಸಂದೇಹ ಬಂದಾಗ ಮನೆಯಲ್ಲಿ ಇದ್ದ ಓಲೆಗರಿ ಗ್ರಂಥಗಳಲ್ಲಿ ಬೇಕಾದ ವಿಷಯವನ್ನು ಅವಲೋಕಿಸುತ್ತಿದ್ದರು. ಪತ್ರಿಕೆ ಓದುತ್ತಿದ್ದರು.

ಮನೆಯಲ್ಲಿ ವರಮಹಾಲಕ್ಷ್ಮಿ ವ್ರತ, ಅನಂತನ ವ್ರತ ಆಚರಿಸುತ್ತಿದ್ದರು. ನಿತ್ಯವೂ ವಿದ್ಯಾರ್ಥಿಗಳಿಗೆ ವಾರ ಕೊಟ್ಟಿದ್ದರು. ಸುತ್ತ ಮುತ್ತಲ ಗ್ರಾಮಗಳ ಜನ ರೆವಿನ್ಯೂ ಕೆಲಸಕ್ಕೆ ಬಂದವರು, ಕಿಕ್ಕೇರಿಯ ಹಿತೈಷಿಗಳು, ನಮ್ಮ ಮನೆಗೆ ಬರದೆ ಹೋಗುತ್ತಿರಲಿಲ್ಲ. ನಮ್ಮ ತಂದೆ ತಾಯಿ ಅವರನ್ನು ಊಟ ಮಾಡಿಸದೆ ಕಳುಹಿಸುತ್ತಿರಲಿಲ್ಲ.

ನಮ್ಮ ತಾಯಿಯವರದು ಮುಕ್ತ ಹಸ್ತ. ಅವರಿಗೆ ಅನೇಕ ಕೆಲಸಗಳಿಗೆ ಸಹಾಯ ಬೇಕಿತ್ತು. ನೀರು ತರುವುದಕ್ಕೆ, ನೀರು ಸೇದುವುದಕ್ಕೆ, ಕಸ ಮುಸುರೆಗೆ, ಬಟ್ಟೆ ಒಗೆಯುವುದಕ್ಕೆ. ಎಲ್ಲರಿಗೂ ಸಂತೋಷದಿಂದ ಅವರ ಕೊಡುಗೈ ರುಚಿ ತೋರಿಸುತ್ತಿದ್ದರು.

ನಮ್ಮ ಹಿರಿಯಣ್ಣ ಡಾ. ವೆಂಕಟರಮಣಯ್ಯ , ಯಶಸ್ವಿ ವೈದ್ಯರೆನಿಸಿ ನಿಡುವಾಲೆಯಿಂದ ಮಂಡ್ಯಕ್ಕೆ ಬಂದವರು ಚಿತ್ರದುರ್ಗ, ಹಿರಿಸಾವೆ ಬಾಗೂರು, ಕಿಕ್ಕೇರಿ, ನ್ಯಾಮತಿ, ಶಿವಮೊಗ್ಗ ಇಲ್ಲೆಲ್ಲಾ ಸುತ್ತಾಡಿ 1963ರಲ್ಲಿ ಕನಕಪುರ ಆಸ್ಪತ್ರೆಯ ವೈದ್ಯಾಧಿಕಾರಿ ಗಳಾದರು. ಇತ್ತ ನನ್ನ ತಮ್ಮನು ಕೆ. ಆರ್. ಪೇಟೆಯಲ್ಲಿ ವಯಸ್ಸಿನಿಂದ ಬಾಗುತ್ತಿದ್ದ ನಮ್ಮ ತಂದೆಯವರು ಔಷಧಾಲಯ ಮುಚ್ಚಲು ಸಫಲನಾದನು. ಅವರ ದೃಷ್ಟಿ ಸ್ವಲ್ಪ ಮಂಜಾಗುತ್ತಾ ಬಂದಿತ್ತು. ಔಷಧಗಳ ವಿತರಣೆಯಲ್ಲಿ ವ್ಯತ್ಯಾಸ ಆಗಿ ಜನಗಳಿಗೆ ತೊಂದರೆ ಆದೀತೆಂಬ ಹೆದರಿಕೆ.

ಆಮ್ಲೀಯತೆ, ಕೀಲುನೋವು, ಮೂಲವ್ಯಾಧಿ ಇವುಗಳು ನಮ್ಮ ತಂದೆಯನ್ನು ಕಾಡಿದವು. ಸ್ವಂತ ಔಷಧಗಳಿಂದ ಗುಣ ಆಗಲಿಲ್ಲ. 'ನಾನು ಎಲ್ಲಾ ಮಾಡಿ ನೋಡಿದೆ. ಸರಿ ಬರಲಿಲ್ಲ. ನಿನ್ನ ಕೈಲಾದದ್ದು ಮಾಡು' ಎಂದು ಕನಕಪುರ ಸೇರಿ ಮಗನಿಗೆ ಹೇಳಿದರು.

ಅಣ್ಣನವರು ಅವರ ದೇಹಾರೋಗ್ಯ ಸಮತೋಲನದಲ್ಲಿರುವಂತೆ ಔಷದೋಪಚಾರ ಮಾಡಿದರು. ಆದರೂ ಅವರು 23-3-1963ರಲ್ಲಿ ವೃದ್ಧಾಪ್ಯದಿಂದ ಎಪ್ಪತ್ತಾರನೆಯ ವಯಸ್ಸಿನಲ್ಲಿ ಕೊನೆಯ ಉಸಿರು ಎಳೆದರು.

ನಾನು ಬೆಂಗಳೂರಿನಲ್ಲಿ ಕಟ್ಟಿದ 'ಪಂಡಿತರ ಹಟ್ಟಿ'. ಗೃಹ ಪ್ರವೇಶದ ಸಮಯದಲ್ಲಿ 'ಪಂಡಿತರ ಹಟ್ಟಿಯ ಹಲವು ಹಿರಿಯರು' - ಒಂದು ನೆನಪು ಬರೆದು ಆಹ್ವಾನಿತರಲ್ಲಿ ಹಂಚಿದೆ. ಅವರಲ್ಲಿ ನಮ್ಮ ತಂದೆಯವರನ್ನು ಕುರಿತು ಬರೆದ ನೆನಪಿನ ಕೆಲವು ವ್ಯಾಕ್ಯಗಳು ಹೀಗಿವೆ:

''ಶ್ರವಣಬೆಳಗೊಳ, ಕಿಕ್ಕೇರಿ, ಕಾಂತರಾಜಪುರ, ಬೂಕಿನಕೆರೆ ಇವು ಇವರ ಸೇವಾಕ್ಷೇತ್ರಗಳು. ಜಿಲ್ಲಾ ಬೋರ್ಡು ವೈದ್ಯಶಾಲೆಗಳು, ಊರಿನ ಆಸ್ಪತ್ರೆ ಬಂದ ಒಡನೆ ಇವರಿಗೆ ಎತ್ತಂಗಡಿ! ಆದರೂ ಧೃತಿಗೆಡದೆ ತಮ್ಮ ಕ್ಷೇತ್ರದಲ್ಲಿ ಅಪಾರ ಸೇವೆ ಸಲ್ಲಿಸಿದರು.

ದೊಡ್ಡ ಸಂಸಾರ, ಐದು ಜನ ಗಂಡು ಮಕ್ಕಳು, ನಾಲ್ವರು ಹೆಣ್ಣು ಮಕ್ಕಳು. ಆಯುರ್ವೇದಕ್ಕೆ ಪ್ರೋತ್ಸಾಹವಿಲ್ಲದ 'ಇಂಗ್ಲಿಷ್' ವೈದ್ಯಕ್ಕೆ ಮೋಹ ಹೊಂದಿದ ಸಮಾಜ. ಇದರ ನಡುವೆ ಅವರ ಪ್ರಾವೀಣ್ಯ, ಬಿರುಗಾಳಿಗೆ ಸಿಕ್ಕಿದ ಗಟ್ಟಿ ಹಡಗಾಗಿತ್ತು.''

''1963ರಲ್ಲಿ ಅವರು ನಿಧನರಾದಾಗ ದೊಡ್ಡ ವ್ಯಕ್ತಿಯನ್ನು ಕಳೆದುಕೊಂಡ ನಮಗೆಲ್ಲಾ ಅತೀವ ವ್ಯಸನವಾಯಿತು. ಅವರ ತಿಳಿವಳಿಕೆ ಆಯುರ್ವೇದದಲ್ಲಿ ಅವರೊಂದಿಗೇ ನಶಿಸಿತು ಎಂದು ಎನಿಸುತ್ತದೆ. ಕಾರಣ, ಅವರ ತಂದೆಯವರು ಅವರಿಗೆ ಧಾರೆಯೆರೆದ ಅಪಾರ ಜಾನವನ್ನು ನಾವು ಯಾರೂ ಪಡೆದುಕೊಳ್ಳಲು ಉತ್ಸುಕರಾಗಲಿಲ್ಲ.''

ಕೆ.ಆರ್ ಪೇಟೆಯಲ್ಲಿ ನಮ್ಮ ತಂದೆ ಓದಿದ,ಸಂಸಾರ ಮಾಡಿದ ಮನೆಯಲ್ಲಿ ಮನೆತನದ ದೀಪ ಈಗಲೂ ಉರಿಯುತ್ತಿದೆ. ಮೊಲು ಅತ್ತಿಗುಪ್ಪೆ ರಾಮಣ್ಣನವರ ಮನೆ, ನಂತರ ಪಂಡಿತರ ಮನೆ, ಆಮೇಲೆ ಕಿಟ್ಟಣ್ಣನವರ ಮನೆ. ಈಗ ಕರೆಯುತ್ತಾರೆ 'ವಾಸಪ್ಪನ ಮನೆ ; ವತ್ಸಪ್ಪನ ಮನೆ,' ವಾಸು - ವತ್ಸ ಕೃಷ್ಣಸ್ವಾಮಿಯ ಮಕ್ಕಳು. ದಿ|| ಕೃಷ್ಣಸ್ವಾಮಿಯ ಮಡದಿ ಸುಶೀಲ, 'ಬನ್ನಿ ಇದು ನಿಮ್ಮ ಮನೆ' ಎಂದು ಆದರಿಸುತ್ತಾಳೆ. ನಮಗೂ, ಅದು 'ನಮ್ಮ ಮನೆ.'

ಹಿರಿಯರು ವಾಸಿಸಿದ ಮನೆ ; ಎಲ್ಲರನ್ನೂ ಆದರಿಸಿ ಸತ್ಕರಿಸುವ ಮನೆ ಈಗಲೂ!

ನನ್ನ ಒಂದು ಅನುಭವ

ಬೇಸಿಗೆ ರಜೆಯಲ್ಲಿ ನನಗೆ ತರೀಕೆರೆಯಿಂದ ಕೆ.ಆರ್. ಪೇಟೆ ಹೈಸ್ಕೂಲಿಗೆ ವರ್ಗ ಆಯಿತು. ಎರಡುವರ್ಷದ ಮಗುವಿನೊಂದಿಗೆ ತವರುಮನೆ ನಂಜನಗೂಡಿಗೆ ಹೋಗಿದ್ದಳು. ಮಗುವಿಗೆ ಬೇಧಿ ಆಗುತ್ತಿದೆ. ಡಾ।। ನರಸಿಂಹಮೂರ್ತಿ ಔಷಧಿ ಕೊಡುತ್ತಿದ್ದಾರೆ. ಹದಿನೈದು ದಿನ ಆಯಿತು. ಮಗುವು ಚೇತರಿಸಿಕೊಳ್ಳುತ್ತಲು ಕಳಿಸಿಕೊಡುತ್ತಾರೆ ಎನ್ನುವ ವಿಷಯ ತಿಳಿಸಿದೆ. ''ಹೋಗಿ ಕರ್‍ಕೊಂಡು ಬಾ, ನಾನು ನೋಡ್ಕೋತ್ತೀನಿ'' ಅಂದ್ರು ನಮ್ಮ ತಂದೆ. ಹಾಗೆಯೇ ಊರಿಗೆ ಬಂದಾಯಿತು. ಬೆಳಿಗ್ಗೆ ಸಂಜೆ ಒಂದು ಚಮಚ ಅವರ ಔಷಧಿ ಎರಡು ದಿನ ಕೊಟ್ಟರು. ಮಗುವು ಹುಷಾರಾಯಿತು.

ಅವರು ಸಂಧ್ಯಾವಂದನೆ ಕೂರುವ ಜಾಗದಲ್ಲಿ, ಮೇಲೆ ಕಿಟಕಿಯಿತ್ತು. ಅದರ ಬಡುವಿನ ಮೇಲೆ ಔಷಧಿ ಇಟ್ಟಿದ್ದರು. ಇವನು ಸಮಯಕ್ಕೆ ಸರಿಯಾಗಿ ಅಲ್ಲಿ ಹಾಜರು ! ತೊಗೋ, ಎಂದು ಒಂದು ಚಮಚ ಔಷಧಿ ಚೀಪಿಸುತ್ತಿದ್ದರು. ಹುಷಾರಾದನಲ್ಲ, ಇನ್ನೇಕೆ ಔಷಧಿ ಎಂದು ಕೇಳಿದೆ. ಇದು ಮಕ್ಕಳಿಗೆ ಟಾನಿಕ್ ಇದ್ದ ಹಾಗೆ. ಎಷ್ಟು ಕೊಟ್ಟರೂ ತೊಂದರೆ ಇಲ್ಲ ಎಂದು ಹೇಳಿದರು. ಅದು 'ಓಂ ಶರಬತ್ತು' - ಅವರು ವಾದಕ್ಕಿಯಿಂದ ಮನೆಯಲ್ಲಿ ತಯಾರಿಸಿದ್ದು. ಮೆಡಿಕಲ್ ಸ್ಟೋರ್ಸಿನಲ್ಲಿ ದೊರಕುವ ಗ್ರೈಪ್ ವಾಟರ್‌ನ ಆಯುರ್ವೇದ ಪರ್ಯಾಯ (ನೋಡಿ ಪಂಡಿತರ ಟಿಪ್ಪಣಿಯಿಂದ)

ಪಾರ್ವತಮ್ಮ

ತಂದೆ ವೆಂಕಟಸುಬ್ಬಯ್ಯನವರನ್ನು ನೆನೆಸಿಕೊಂಡು ಬರೆದಾಗ ಪ್ರತ್ಯೇಕವಾಗಿ ನಮ್ಮ ತಾಯಿ ಪಾರ್ವತಮ್ಮನವರನ್ನು ನೆನೆಸಿಕೊಳ್ಳಲೇಬೇಕು. ಅವರನ್ನು ಚಿನ್ನಮ್ಮ ಎಂದು ಎಲ್ಲರೂ ಕರೆಯುತ್ತಿದ್ದರು.

ಯಾರ ತಾಯಿ ಯಾರಿಗೆ ಚಿನ್ನವಲ್ಲ! ಒಮ್ಮೆ ಕೆಲವು ಹಿರಿಯ ಹೆಂಗಸರು ಮನೆಗೆ ಬಂದಿದ್ದರು. ನಿಮ್ಮ ಅಮ್ಮನಿಗೆ ಚಿನ್ನದ ಸರವನ್ನು ಯಾವಾಗ ಮಾಡಿಸುತ್ತೀಯೊ ಎಂದು ಚಿಕ್ಕವನಾದ ನನ್ನನ್ನು ತಮಾಷೆಗೆಂದು ಕೇಳಿದರು.

'ನಮ್ಮ ಅಮ್ಮನೆ ಚಿನ್ನ ; ಅವರಿಗೆ ಇನ್ನೆಂತಹ ಚಿನ್ನ ತರುವುದು !'' ಎಂದು ಉತ್ತರ ಕೊಟ್ಟಿದ್ದೆ. 'ಕೇಳಿದೆಯಾ ಚಿನ್ನಕ್ಕ, ನಿನ್ನ ಮಗನ ಜಾಣ ಮಾತು !' ಎಂದರು ಅವರು. ನಮ್ಮ ಅಮ್ಮ ಇದನ್ನು ನೆನೆಸಿಕೊಂಡು ಸಂತೋಷ ಪಡುತ್ತಿದ್ದರು.

ಅಚ್ಚುಕಟ್ಟು, ಜಾಣತನ, ನಾಜೂಕು ಇವುಗಳಿಗೆ ಹೆಸರಾದವರು ನಮ್ಮ ತಾಯಿ. ನಾವು ಯಾರಾದರೂ ಬಂಧುಗಳು ಮನೆಯಲ್ಲಿ ಸೌಜನ್ಯದ ಅಥವಾ ಅಚ್ಚುಕಟ್ಟಿನ ನಡೆವಳಿಕೆ ತೋರಿದರೆ 'ಯಾರ ಮಗ ಅವನು ; ಚಿನ್ನಮ್ಮನ ಮಗ!' ಎನ್ನುತ್ತಿದ್ದರು.

ಚಿಕ್ಕವಯಸ್ಸಿನಲ್ಲಿ ಮೈಸೂರಿನ ನಾಜೂಕುತನದ ಸಮೀಪದಿಂದ (ಶ್ರೀರಂಗಪಟ್ಟಣ) ಸಿಂಧು ಘಟ್ಟದಂತಹ ಹಳ್ಳಿಯ ನಮ್ಮ ತಂದೆಯವರನ್ನು ಮದುವೆಯಾಗಿ ದೊಡ್ಡ ಸಂಸಾರವನ್ನು ವಿಚಕ್ಷಣೆಯಿಂದ ನಿರ್ವಹಿಸಿದ ಕೀರ್ತಿ ನಮ್ಮ ತಾಯಿಯವರದು.

ವಿದ್ಯೆ ಎಂದರೆ ಬಲು ಮೋಹ. ಆಯುರ್ವೇದಕ್ಕೆ ಅಸಡ್ಡೆಯಿದ್ದ ಜನತೆಯ ಭಾವವನ್ನು ಅರಿತು, ಹಠದಿಂದ ದೊಡ್ಡ ಅಣ್ಣನನ್ನೂ L.P.M. ಡಾಕ್ಟರನ್ನಾಗಿ - ಹಣ ಕೊಯ್ದರೂ ಪರವಾಗಿಲ್ಲ! - ಮಾಡಿದ್ದು ನಮ್ಮ ಅಮ್ಮ ಎರಡನೆಯ ಮಗ ಆಯುರ್ವೇದ ಪ್ರವೀಣನಾಗಲು ಹೇಗೆ ಒಪ್ಪಿದರೊ ನಾನು ಅರಿಯೆ ! ನಮ್ಮೆಲ್ಲರ ವಿದ್ಯಾಭ್ಯಾಸದಲ್ಲಿಯೂ ಅಪಾರವಾದ ಆಸಕ್ತಿ ವಹಿಸುತ್ತಿದ್ದರು. ಅದಕ್ಕಾಗಿ ಅವರು ಏನು ತ್ಯಾಗ ಬೇಕಾದರೂ ಮಾಡುತ್ತಿದ್ದರು.

ಅವರು ಎಷ್ಟು ಬೇಕಾದರೂ ಚಿನ್ನ ಮಾಡಿಸಿಕೊಂಡು ಮೆರೆಯಬಹುದಾಗಿತ್ತು. ಅವರು ಚಿನ್ನದ ಬಗ್ಗೆ ಸ್ವಲ್ಪವೂ ಮೋಹಗೊಳ್ಳಲಿಲ್ಲ. ಬದಲಾಗಿ, ಅವರು ಅತಿಥಿ ಸತ್ಕಾರಕ್ಕೆ, ವಿದ್ಯಾರ್ಥಿಗಳ ಯೋಗಕ್ಷೇಮಕ್ಕೆ ಹಣ ವಿನಿಯೋಗ ಮಾಡುತ್ತಿದ್ದರು. ಯಾವಾಗಲೂ ವಿದ್ಯಾರ್ಥಿಗಳು ವಾರದ ಊಟಕ್ಕೆ ಇರುತ್ತಿದ್ದರು. ಅವರಿಗೆ ಅಕ್ಕರೆಯಿಂದ ಊಟ ಮಾಡಿಸುತ್ತಿದ್ದರು. ಮನೆಯಲ್ಲಿ ಯಾವಾಗಲೂ ಅತಿಥಿಗಳು ಇರುತ್ತಿದ್ದರು. ಅವರು ಮಾಡುವ ರುಚಿಯಾದ ಅಡುಗೆ ಎಲ್ಲರ ಮೆಚ್ಚುಗೆ. ಅವರ ಈ ಸಂಪ್ರದಾಯ ಈಗಲೂ ತಪ್ಪದೆ ನಡೆದಿದೆ, ಕೆ.ಆರ್. ಪೇಟೆಯಲ್ಲಿ ಇರುವ ನಮ್ಮ ಮನೆಯಲ್ಲಿ.

ಮೊಮ್ಮಕ್ಕಳಿಗೆಲ್ಲಾ ಅತಿ ಪ್ರೀತಿಯ ಅಜ್ಜಿ ಅವರ ಎದುರು ನಿಂತರೆ, ಮೊದಲ ಪ್ರಶ್ನೆ 'ಈಗ ನೀನು ಯಾವ ಕ್ಲಾಸು ?' ಯಾರೂ ಅವರಿಗೆ ಸುಳ್ಳು ಹೇಳಲು ಸಾಧ್ಯವಾಗುತ್ತಿರಲಿಲ್ಲ. ವಿದ್ಯಾಭ್ಯಾಸದ ಕ್ರಮಗಳನ್ನೆಲ್ಲಾ ಅವರು ಅರಿತಿದ್ದರು. ದಸರ ಸಮಯದಲ್ಲಿ ಪರೀಕ್ಷೆ ಬರೆದವರನ್ನು ಅವರು ಕೇಳುತ್ತಿದ್ದರು. 'ಎಷ್ಟು ಉಳಿದಿತ್ತು ?' ಸಿಂಗಲ್ ಆರ್ಡಿನಾನ್ಸ್, ಡಬಲ್ ಆರ್ಡಿನಾನ್ಸ್ ಎಲ್ಲಾ ಅವರಿಗೆ ತಿಳಿಯುತ್ತಿತ್ತು. ಅವರಿಗಿದ್ದ ದೊಡ್ಡ ನ್ಯೂನತೆ ಎಂದರೆ, ಕಿವಿ ಕೇಳದಿದ್ದುದು. ಕೇವಲ ತುಟಿಗಳ ಅಲುಗಾಟವೇ ಅವರಿಗೆ ಮಾತು ಅರ್ಥವಾಗಲು ಸಾಕಾಗಿತ್ತು.

ಅವರ ಕೊನೆಯ ದಿನಗಳಲ್ಲಿ ಸ್ಲೇಟಿನ ಮೇಲೆ ಬರೆದು ಅವರಿಗೆ ವಿಷಯ ತಿಳಿಸುತ್ತಿದ್ದೆವು. ಮೂರು ಅಕ್ಷರ ಬರೆದರೆ ಪೂರ್ಣವಾಗಿ ವಿಷಯ ಗ್ರಹಣ ಮಾಡುತ್ತಿದ್ದರು.

ಅವರ ಜಾಣತನ, ಅನೇಕ ವೇಳೆ ಮನೆ ಮಂದಿಗೆಲ್ಲಾ ಕಷ್ಟವಾಗುತ್ತಿತ್ತು. ಅತಿ ವೇಗದ ಓಟಗಾರನೊಂದಿಗೆ ಅಮೆಯ ಹೆಜ್ಜೆಯ ಸಮಾಚಾರ ಅಷ್ಟೆ! ಸೊಸೆಯರಿಗಂತು ಬಹಳ ಮುಜುಗರಗಳಾಗಿರಬೇಕು!

ಆದರೂ ಇವರು ಎಲ್ಲರಿಗೂ ಬೇಕಾದ ಹಿರಿಯರಾಗಿ ಬಾಳಿದರು. ಇವರ ಕೊಡುಗೈ ಎಲ್ಲರಿಗೂ ಆದರ್ಶ.

ಹುಟ್ಟುಹೆಸರು ಪಾರ್ವತಿ, ಚಿನ್ನವಾಗಿ ಮೈ ಗೂಡಿಸಿಕೊಂಡು ಧನ್ಯರಾದ ಇವರ ಮಕ್ಕಳಾದದ್ದು ನಮ್ಮೆಲ್ಲರ ಹೆಮ್ಮೆ.

ಉಪ ಸಂಹಾರ

ಪಂಡಿತ ವೆಂಕಟಸುಬ್ಬಯ್ಯನವರ ವಂಶವೃಕ್ಷವು ಒಂದು ಹೆಮ್ಮರ. ಒಂಬತ್ತು ಮಕ್ಕಳೂ, ನಲವತ್ನಾಲ್ಕು ಮೊಮ್ಮಕ್ಕಳೂ, ಎಂಬತ್ನಾಲ್ಕು ಮರಿಮಕ್ಕಳೂ ಅಲ್ಲದೆ ನಲವತ್ತೆರಡು 'ಕೋಲು ಮಕ್ಕಳೂ' ಇರುವ ಈ ವೃಕ್ಷದಲ್ಲಿನ ಹೆಸರುಗಳ ಪಟ್ಟಿ ಬರೆದರೆ, ನವಜಾತ ಶಿಶುಗಳ ನಾಮಕರಣಕ್ಕೆ ಮಾರ್ಗದರ್ಶಿ ಆಗಬಹುದು! ಆದರೆ, ಈ ಪುಟ್ಟ ಪುಸ್ತಕದಲ್ಲಿ ಸ್ಥಳಾವಕಾಶವಿಲ್ಲ.

ಸ್ವಾರಸ್ಯವೆಂದರೆ, ಇಲ್ಲಿ ಇಪ್ಪತ್ತಾರು ವೈದ್ಯರು ಕಾಣಸುತ್ತಾರೆ. ಎಲ್ಲರೂ ಜನಾನುರಾಗಿ ವೈದ್ಯರೇ. ಕೆಲವರು ವಿದೇಶಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

ಇವರಲ್ಲಿ ಎಲ್ಲರಿಗಿಂತ ಹಿರಿಯರು ಡಾ. ವೆಂಕಟರಮಣಯ್ಯ (1909-1980) ಮತ್ತು ಅವರ ಸೋದರ ಡಾ. ಶ್ರೀನಿವಾಸ ಮೂರ್ತಿ (1911-1999) ಇವರಿಬ್ಬರ ಹೆಸರು ಹಿಂದೆಯೇ ಬಂದಿದೆ. ವೆಂಕಟರಮಣಯ್ಯನವರು L.M.P. ಪದವಿ ಗಳಿಸಿ, ಸರಕಾರಿ ಸೇವೆ ಸೇರಿ, ಸಂಸ್ಥಾನದ ವಿವಿಧ ಜಿಲ್ಲೆಗಳಲ್ಲಿ ಸೇವ ಸಲ್ಲಿಸಿದರು. ಇವರು ತಾವು 'ತುಂಟ ಹುಡುಗನಾಗಿ' ಕುಣಿಯುತ್ತಿದ್ದ ಕಿಕ್ಕೇರಿಯಲ್ಲೂ ಮೂರು ವರ್ಷ ಆಸ್ಪತ್ರೆಯ ವೈದ್ಯರಾಗಿ ಇದ್ದರು. ಆಸ್ಪತ್ರೆಯ ನೌಕರ 'ಈರಯ್ಯ' 'ನಮ್ಮ ಡಾಕ್ಟರು, ಸ್ಕೂಲ್ನಲ್ಲಿ ನನ್ನ

ಕ್ಲಾಸ್ನಾಗೆ ಓದುತ್ತಿದ್ದರು' ಎಂದು ಹೆಮ್ಮೆಯಿಂದ ಹೇಳುತ್ತಿದ್ದ! ಊರಿನಲ್ಲಿ 'ನಮ್ಮ ಸುಂಟು ಡಾಕ್ಟರು' ಎದು ಜನಪ್ರಿಯರು.

ಇವರ ಮಗ ಪ್ರೊ. ಎಸ್. ವಿ. ಸುಬ್ಬರಾವ್ ಅವರ ಮಕ್ಕಳಾದ ಡಾ|| ಪದ್ಮ ಮತ್ತು ಡಾ|| ರೂಪ U.S.A ನಲ್ಲಿ ವೈದ್ಯರಾಗಿದ್ದಾರೆ. ಡಾ|| ಪದ್ಮ ಅವರ ಪತಿ ಡಾ|| ಗುರುಪ್ರಸಾದ್ ಕಾಗಿನೆಲೆಯವರು ವೈದ್ಯರೂ ಅಲ್ಲದೆ ಹೆಸರಾಂತ ಸಾಹಿತಿ.

ಡಾ|| ಕೃಷ್ಣ ವೆಂಕಟರಮಣಯ್ಯನವರ ಕೊನೆಯಮಗ, ಖಾಸಗಿಯಾಗಿ ಬೆಂಗಳೂರಿನಲ್ಲಿ ತಂದೆಯಂತೆ ಜನಾನುರಾಗಿ ವೈದ್ಯರು.


ಡಾಕ್ಟರ್ ಶ್ರೀನಿವಾಸ ಮೂರ್ತಿಗಳು, ತಂದೆ ಓದಿದ ಕಾಲೇಜಿನಲ್ಲಿ ಆಯುರ್ವೇದ ವೈದ್ಯಾಭ್ಯಾಸ ಮಾಡಿ, ಪ್ರಥಮ ರ್‍ಯಾಂಕ್‌ನಿಂದ L.A.M.S ಪದವಿ ಗಳಿಸಿದರು. ಹೊಸಹೊಳಲಿನಲ್ಲಿ ವಾಸಿಸುತ್ತಿದ್ದು ವಿಠಲಾಪುರದ ಜಿಲ್ಲಾ ಬೋರ್ಡು ವೈದ್ಯಶಾಲೆಯ ವೈದ್ಯರಾಗಿ ಸುತ್ತಣ ಗ್ರಾಮಾಂತರದ ಜನತೆಗೆ 'ಸೀನಪ್ಪ ಡಾಕ್ಟರ್' ಆಗಿ ಸೇವೆ ಸಲ್ಲಿಸುತ್ತಿದ್ದನ್ನು ಈಗಲೂ ಜನ ಸ್ಮರಿಸುತ್ತಾರೆ.

ಅಪ್ರಸ್ತುತ ಎನಿಸದ ಹೆಸರು, ಡಾ. ನಾರಾಯಣಸ್ವಾಮಿ, ಮಡದಿ ಡಾ|| ನಾಗರತ್ನ ಅವರೊಡನೆ ಮಂಡ್ಯದಲ್ಲಿ ಇವರು ವೃತ್ತಿ ನಿರತರು. ಇವರ ಮೂವರು ಮಕ್ಕಳೂ ವೈದ್ಯರೆ. ಅಳಿಯ, ಸೊಸೆ ಅಲ್ಲದೆ ಇಬ್ಬರು ಭಾವಂದಿರೂ - ಡಾ. ಶ್ರೀಕಂಠಯ್ಯ, ಡಾ. ಆನಂದ್ - ವೈದ್ಯರೆ! ಹಾಗೂ ಕಿರಿಯ ಸೋದರ ಡಾ. ರಮೇಶ್, ಶ್ರೀಲಂಕಾ, ಭೂತಾನ್‌ಗಳಲ್ಲಿ ಸೇವೆ ಸಲ್ಲಿಸಿ ಈಗ ಬೆಂಗಳೂರಿನಲ್ಲಿ ಖಾಸಗಿಯಾಗಿ ವೃತ್ತಿ ಶೀಲರಾಗಿ ಇದ್ದಾರೆ.

ಹೆಚ್ಚುಗಾರಿಕೆ ಎಂದರೆ, ವಿಪ್ರ ವೃಂದದಲ್ಲೂ , ಹೊಯ್ಸಳ ಕರ್ಣಾಟಕ ಸಂಘದಲ್ಲೂ ಡಾ. ನಾರಾಯಣ ಸ್ವಾಮಿಯವರು ಸಕ್ರಿಯವಾಗಿ ಭಾಗವಹಿಸುತ್ತಿದ್ದಾರೆ.

ವಂಶದಲ್ಲಿ ವೈದ್ಯ ವಾಹಿನಿ ಜೀವಂತವಾಗಿದೆ.

★★★★



ಹೊಯ್ಸಳ ಮಾಲೆ

ಹೊಯ್ಸಳ ಕರ್ನಾಟಕ ಜನಾಂಗವು ಸ್ಮಾರ್ತಬ್ರಾಹ್ಮಣ ಸಂಪ್ರದಾಯದ ಒಂದು ಪುಟ್ಟ ಪಂಗಡ. ಕರ್ನಾಟಕ ರಾಜ್ಯದ ಚಿಕ್ಕಮಗಳೂರು, ಶಿವಮೊಗ್ಗ, ಹಾಸನ, ಮೈಸೂರು, ಮಂಡ್ಯ, ತುಮಕೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ವಿಶೇಷವಾಗಿ ಇವರ ಇರುವು. ವಿಜಯನಗರದ ಕಾಲದಲ್ಲಿ ಕೆಲವು ಕುಟುಂಬಗಳು ತಮಿಳುನಾಡಿನ ತಂಜಾವೂರು ಪ್ರದೇಶಕ್ಕೆ ತೆರಳಿ, ಇಂದಿಗೂ ಕೆಲವು ಕುಟುಂಬಗಳು ಅಲ್ಲಿಯೇ ನೆಲೆಸಿವೆ. ಸಮಾಜದ ನಾನಾ ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತಿರುವ ನಮ್ಮ ಜನ ಇಂದು ವಿಶ್ವದ ನಾನಾ ಭಾಗಗಳಲ್ಲಿದ್ದಾರೆ.

ನಮ್ಮ ಪಂಗಡ ಪುಟ್ಟದಾದರೂ ನಮ್ಮ ಅನೇಕ ಜನರು ಪ್ರಖ್ಯಾತರಾಗಿ ಸಮಾಜಕ್ಕೆ ವಿಶಿಷ್ಟವಾದ ಕೊಡುಗೆಯನ್ನು ನೀಡಿ ಕೀರ್ತಿಶಾಲಿಗಳಾಗಿದ್ದಾರೆ. ಜನತೆಯ ವಿಶ್ವಾಸ, ಗೌರವ ಮನ್ನಣೆಗೆ ಪಾತ್ರರಾಗಿರುವ ಅನೇಕರೂ, ಉದಯೋನ್ಮುಖ ಪ್ರತಿಭಾವಂತರೂ ಇಂದು ನಮ್ಮೊಡನೆಯೇ ಇದ್ದಾರೆ.

ಈ ಎಲ್ಲಾ ಪ್ರತಿಭಾಸಂಪನ್ನರನ್ನು ನಮ್ಮ ಇಂದಿನ ಪೀಳಿಗೆಗೂ, ಸಮಾಜಕ್ಕೂ, ಪರಿಚಯಿಸಿ, ಪ್ರಚರಿಸಿ, ದಾಖಲಿಸುವ ಸದುದ್ದೇಶದಿಂದ ಬೆಂಗಳೂರಿನ ಹೊಯ್ಸಳ ಕರ್ನಾಟಕ ಸಂಘವು ಈ ಹೊಯ್ಸಳ ಮಾಲೆಯ ಪ್ರಕಟಣಾ ಕಾರ್ಯವನ್ನು ಕೈಗೊಂಡಿದೆ.

ಹೊಯ್ಸಳ ಕರ್ನಾಟಕ ಸಂಘ (ರಿ.)
3ನೇ ಅಡ್ಡರಸ್ತೆ, ಹೊಂಬೇಗೌಡನಗರ,
ಬೆಂಗಳೂರು - 560 027
ಫೋನ್ : +91-80-2227 4411